


ಕಲ್ಯಾಣ ಕಿರಣ

[redacted]

ನವಂಬರ್ 1990

ಕಲ್ಯಾಣ ಕಿರಣ

ಮಾಸ ಪತ್ರಿಕೆ ನವಂಬರ್, 1990 ಬಿಡಿ ಸಂಚಿಕೆ ೩ ರೂ.

ಸಂಪುಟ : 19 ಸಂಚಿಕೆ : 7 ಬಸವ ಶಕೆ : 885

ವಾರ್ಷಿಕ ಚಂದಾ : 30 ರೂ. ಆಜೀವ ಸದಸ್ಯತ್ವ : 300 ರೂ.

ಕಿರಣಗನ್ನಡಿ

ಹೊದ್ದಿಕೆಯ ಮುಖ ಪುಟ : ಒಣಗಿ ನಿಂತ ಮರ.

ಛಾಯಾಗ್ರಾಹಕ : ಶ್ರೀ ಗೋಪಾಲ್, ಬೆಂಗಳೂರು.

ಹೊದ್ದಿಕೆಯ ನಾಲ್ಕನೆಯ ಪುಟ : ಶರಣೆ. ಲಕ್ಷ್ಮೀದೇವಿ ಮತ್ತು ಮಹಾದೇವ ಇಜಾರ, ಹಳ್ಳಿಖೇಡ ಇವರ ಮಕ್ಕಳಾದ ಅಕ್ಕಮಹಾದೇವಿ-9 ವರ್ಷ, ನೀಲಾಂಬಿಕಾ-4 ವರ್ಷ, ಬಸವೇಶ್ವರಿ-2 ವರ್ಷ.

ದಾಸೋಹಕ್ಕೆ ಕರೆ

ಶರಣ ಮೇಳದಲ್ಲಿ ಪ್ರತಿನಿಧಿ ಶುಲ್ಕ, ಸದಸ್ಯತ್ವ ಶುಲ್ಕ ದೇಣಿಗೆ ಕೊಟ್ಟವರಿಗೆ ಮಾತ್ರವಲ್ಲದೆ ಉಚಿತ ದಾಸೋಹದ ವ್ಯವಸ್ಥೆ ಸಹ ಮಾಡಲಾಗುತ್ತಿದೆ. ಈ ದಾಸೋಹ ವಿಭಾಗಕ್ಕೆ ತಮ್ಮ ತಮ್ಮ ಕೊಡುಗೆ ನೀಡಬೇಕೆನ್ನುವ ಶರಣರು ರೊಟ್ಟಿ, ಚಟ್ನಿಪುಡಿ, ಮಾದಲಿ ಮುಂತಾದ ಸಿದ್ಧ ಪದಾರ್ಥಗಳನ್ನು ತಂದು ಅರ್ಪಿಸಬಹುದು. ಸಿದ್ಧಪಡಿಸಿದ ವಸ್ತುಗಳನ್ನೇ ಅಲ್ಲದೆ ಅಕ್ಕಿ, ಗೋದಿ, ಜೋಳ, ಬೆಲ್ಲ, ಕಾಯಿಪಲ್ಲೆ, ಮೆಣಸಿನಕಾಯಿ ಮುಂತಾದ ದವಸ-ಧಾನ್ಯಗಳನ್ನು ತಂದು ಸಮರ್ಪಿಸಬಹುದು.

ದಾಸೋಹ ವಿಭಾಗದಲ್ಲಿ ಅಡಿಗೆಯವರನ್ನು ನೇಮಿಸಲಾಗುವುದು. ತಾವು ಎಷ್ಟು ಜನ ಬಂದಿರುವರೋ ಅಷ್ಟು ಜನಕ್ಕೆ ಆಹಾರ ಪದಾರ್ಥ ಸಿದ್ಧಪಡಿಸಿಕೊಡಲು ಸಾಮಗ್ರಿಗಳನ್ನು ಒದಗಿಸಿಯೂ ಹೋಗಬಹುದು. ತಮ್ಮ ಮನೆಯವರ ಮಟ್ಟಿಗೆ ಮಾತ್ರವಲ್ಲದೆ ತಮಗೆ ಬೇಕಾದಷ್ಟು ಜನರಿಗೆ ಊಟವನ್ನು ಮಾಡಿಸುವಂತೆ ದವಸ ಧಾನ್ಯ ನೀಡಿ ದಾಸೋಹದಲ್ಲಿ ಭಾಗಿಗಳಾಗಬಹುದು.

ತಾವು ತಂದ ವಸ್ತುಗಳನ್ನು ದಾಸೋಹ ವಿಭಾಗದಲ್ಲಿ ಸಲ್ಲಿಸಬಹುದು. ಮತ್ತು ತಮ್ಮ ಜನರಿಗೆ ಬೇಕಾಗುವಷ್ಟು ಗುರುತಿನ ಚೀಟಿ ಪಡೆಯಬಹುದು.

ಕಲ್ಯಾಣ ಕಿರಣ

ಸಂಪುಟ : 19 ಸಂಚಿಕೆ : 7 ನವಂಬರ್ 1990 ಬಸವ ಶಕೆ : 885

॥ ಓಂ ಶ್ರೀ ಗುರುಬಸವಲಿಂಗಾಯ ನಮಃ ॥

ಕೂಡಲ ಸಂಗಮ ಸುಕ್ಷೇತ್ರದಲ್ಲಿ
ಬಸವ ಕ್ರಾಂತಿ ದಿನದ ಅಂಗವಾಗಿ

ಶರಣ ಮೇಳ

1991 ನೆಯ ಜನವರಿ
13, 14 ಮತ್ತು 15 ರಂದು

ಶರಣ ಬಂಧುಗಳೇ

ಮಹಾಮಾನವತವಾದಿ, ಮಂತ್ರಪುರುಷ, ವಿಶ್ವವಿಭೂತಿ ಬಸವಣ್ಣನವರ ತತ್ತ್ವಗಳಲ್ಲಿ, ಶ್ರದ್ಧೆ ವಿಶ್ವಾಸವಿರುವ ಬಸವ ಭಕ್ತರು, ಬಸವ ತತ್ತ್ವಾಭಿಮಾನಿಗಳು, ಬಸವ ಧರ್ಮೀಯರು, ಲಿಂಗವಂತರು ಎಲ್ಲರೂ ವರ್ಷಕ್ಕೊಮ್ಮೆಯಾದರು ಒಂದು ಸ್ಥಾನದಲ್ಲಿ ಸಮಾವೇಶವಾಗುವುದು ಅತ್ಯಂತ ಅವಶ್ಯಕ, ಇದು ಪರಸ್ಪರರಲ್ಲಿ ಸಮಾನತ್ವ, ಸಹೋದರತ್ವ ಬೆಳೆಸಲು ಸಹಕಾರಿಯಾಗುವುದು ಎಂಬ ಉದ್ದೇಶದಿಂದ ವಿಶ್ವಗುರು ಬಸವಣ್ಣನವರ ವಿದ್ಯಾಭೂಮಿ, ತಪೋಸ್ಥಾನ, ಲಿಂಗೈಕ್ಯ ಕ್ಷೇತ್ರ ಕೂಡಲ ಸಂಗಮದಲ್ಲಿ 1988ನೆಯ ಇಸವಿ 14, 15 ಮತ್ತು 16ರಂದು ಪ್ರಥಮ ಚಾರಿತ್ರಿಕ ಶರಣ ಮೇಳವು ಜರುಗಿತಷ್ಟೇ. ಮೊಟ್ಟ ಮೊದಲನೆಯ ಈ ಐತಿಹಾಸಿಕ ಬೃಹತ್ ಮೇಳವು ಮೂರುವರೆ ಲಕ್ಷಕ್ಕೂ ಮಿಕ್ಕಿದ ಜನ ಸಮೂಹವನ್ನು ಆಕರ್ಷಿಸಿತು, ತುಂಬಿ ನಿಂತ ಬಸವ ಸಾಗರದ ಅಲೆಗಳೊಡನೆ ಸ್ಪರ್ಧಿಸುವಂತೆ ಜನ ಸಾಗರದ ಸಮೂಹವು ಸಮಾವೇಶವಾಗಿ ಬಸವೋದ್ಯಾನದಲ್ಲಿ ನಿರ್ಮಿತವಾದ ಬಸವ ಮಂಟಪದಲ್ಲಿ ಸಾಮುದಾಯ ಪ್ರಾರ್ಥನೆಯನ್ನು ಮಾಡಿತು.

ಇಂತಹ ಶರಣ ಮೇಳವು ಪ್ರತಿವರ್ಷವೂ ಬಸವ ಕ್ರಾಂತಿ ದಿನ(ಮಕರ ಸಂಕ್ರಾಂತಿ)ದ ಅಂಗವಾಗಿ ನಡೆಯಲಿದ್ದು, ನಾಲ್ಕನೆಯ ಶರಣ ಮೇಳವು 1991ನೇ ಇಸವಿಯ ಜನವರಿ 13. 14 ಮತ್ತು 15 ರಂದು ಏರ್ಪಾಟಾಗಲಿದೆ. ಹಲವಾರು ಪ್ರಮುಖ ಮಠಾಧೀಶರು, ಪ್ರವಚನಕಾರರು, ಗಣ್ಯರು, ಸಾಹಿತಿಗಳು ಭಾಗವಹಿಸಿ ಉಪನ್ಯಾಸ ಮಾಡುವರು. ಮುಸಲ್ಮಾನ್ ಧರ್ಮೀಯರಿಗೆ ಮಕ್ಕಾ ಧರ್ಮಕ್ಷೇತ್ರವಾದಂತೆ, ಸಿಖ್ಖರಿಗೆ ಅಮೃತಸರವು ಧರ್ಮಕ್ಷೇತ್ರವಾದಂತೆ, ಬಸವ ಧರ್ಮಾನುಯಾಯಿಗಳಿಗೆ ವಿಶ್ವಗುರು ಬಸವಣ್ಣನವರ ಐಕ್ಯಸ್ಥಾನ ಕೂಡಲ ಸಂಗಮವೇ ಧರ್ಮ ಕ್ಷೇತ್ರ. ಇಂತಹ ಪವಿತ್ರ ತಾಣದಲ್ಲಿ ಸಹೋದರ ಭಾವನೆಯಿಂದ ಎಲ್ಲರೂ ಲಕ್ಷ ಲಕ್ಷಗಟ್ಟಳೆ ಸಂಖ್ಯೆಯಲ್ಲಿ ಬನ್ನಿರಿ.

ಶರಣರ ಬರವೆಮಗೆ ಪ್ರಾಣ ಜೀವಾಳ

ಬೆಂಗಳೂರು ವಿಳಾಸ ;
ಬಸವ ಮಂಟಪ, 2035,
2ನೇ ಬ್ಲಾಕು, ಕಾರ್ಡ್ ರಸ್ತೆ,
ರಾಜಾಜಿನಗರ, ಬೆಂಗಳೂರು-560010

ಪೂಜ್ಯ ಶ್ರೀ ಜಗದ್ಗುರು ಮಾತೆ ಮಹಾದೇವಿ
ಕಾರ್ಯಾಧ್ಯಕ್ಷೆ, ಶರಣ ಮೇಳ ಉತ್ಸವ ಸಮಿತಿ,
ಕೂಡಲ ಸಂಗಮ-587115.
ತಾ-ಹುನಗುಂದ, ಜಿಲ್ಲೆ-ಬಿಜಾಪುರ

ನಾಲ್ಕನೆಯ ಶರಣ ಮೇಳ ಕುರಿತು

ಕಲ್ಯಾಣ ಕಿರಣದ ಓದುಗರಲ್ಲಿ ವಿಶೇಷ ಮನವಿ

ಮಾನ್ಯ ಶರಣ ಬಂಧುಗಳಿಗೆ,

ಹೃತ್ಪೂರ್ವಕ ಶುಭಹಾರೈಕೆಗಳು.

"ಶರಣ ಮೇಳ" ಕಾರ್ಯಕ್ರಮವು ಯಾವುದೇ ಒಬ್ಬ ವ್ಯಕ್ತಿಯ, ಒಂದು ಸಂಸ್ಥೆಯ ಕಾರ್ಯಕ್ರಮವಲ್ಲ, ಇಡೀ ಸಮಾಜದ ಕಾರ್ಯಕ್ರಮ. ಬಸವ ತತ್ತ್ವದ ಬಳ್ಳಿಯು ಅಸಂಖ್ಯಾತ ಶರಣ ಪುಷ್ಪಗಳನ್ನು ಅರಳಿಸುತ್ತಿರುತ್ತದೆ. ಇಂಥ ಎಲ್ಲರನ್ನು ತತ್ತ್ವದ ತಳಹದಿಯ ಮೇಲೆ ಕೂಡಿಸಿ ಸೂತ್ರೀಕರಿಸುವ, ಸಂಸ್ಕರಿಸುವ, ಕಾರ್ಯಕ್ರಮ ಈ ಶರಣ ಮೇಳ.

800 ವರ್ಷಗಳ ನಂತರ, ಬಸವಾದಿ ಪ್ರಮಥರ ಸಂಕಲ್ಪವನ್ನು ಈಡೇರಿಸುವಂತೆ ಅಸಂಖ್ಯಾತ ಶರಣ ತತ್ತ್ವಾಭಿಮಾನಿಗಳ ಕನಸು ನನಸಾಗುವಂತೆ ಈ ಕಾರ್ಯಕ್ರಮವಿದೆ. ಆದ್ದರಿಂದ ಇದು ನಿಮ್ಮಗಳೆಲ್ಲರ ಕಾರ್ಯಕ್ರಮ. ಧನ ಸಹಾಯವನ್ನು ಶರಣಮೇಳಕ್ಕೆ ಸಲ್ಲಿಸಿರೆಂದು ಅನೇಕರಿಗೆ ಪತ್ರಗಳನ್ನು ಬರೆದಿದ್ದೇವೆ. ಆದರೆ ಅಂಚೆ ವೆಚ್ಚವು ವಿಪರೀತವಾಗಿರುವ ಕಾರಣ ನಿಮಗೆಲ್ಲ ಪ್ರತ್ಯೇಕ ಪತ್ರ ಬರೆಯಲು ಸಾಧ್ಯವಾಗದು. ಆದ್ದರಿಂದ ಕಲ್ಯಾಣ ಕಿರಣದಲ್ಲಿ ಪ್ರಕಟವಾಗುತ್ತಿರುವ ಈ ಮನವಿಯನ್ನು ಪ್ರತಿಯೊಬ್ಬರಿಗೂ ಬರೆದ ವೈಯಕ್ತಿಕ ಪತ್ರವೆಂದು ಭಾವಿಸಿ, ಹಣದ ನೆರವನ್ನು ಒದಗಿಸಿರಿ ಮತ್ತು ನೀವುಗಳೆಲ್ಲರೂ ಬಂದು ಕಾರ್ಯಕ್ರಮದಲ್ಲಿ ಭಾಗಿಗಳಾಗಲು ಸಂಕಲ್ಪಿಸಿರಿ.

ಮುಸ್ಲೀಮರು ಸಮುದ್ರಯಾನ, ವಿಮಾನಯಾನ ಮಾಡಿ ಮೆಕ್ಕಾ ಯಾತ್ರೆಗೆ ಹೋಗುವರು. ಅದು ತಮ್ಮ ಜೀವಮಾನದಲ್ಲಿ ಮಾಡಬೇಕಾದ ಕರ್ತವ್ಯ ಎಂದು ಭಾವಿಸುವರು. ಅದರಂತೆ ತಾವೂ ಕೂಡಲ ಸಂಗಮಕ್ಕೆ ಬರಬೇಕಾದುದು, ಅದನ್ನು ಬೆಳೆಸಬೇಕಾದುದು ನಿಮ್ಮ ಆದ್ಯ ಕರ್ತವ್ಯ ಎಂದು ಭಾವಿಸಬೇಕು. ಬಸವ ತತ್ತ್ವದ ಪರಿಮಳವನ್ನು ಬೀರುವ ಕರಂಡಕವಾಗಿ ಕೂಡಲ ಸಂಗಮವು ರೂಪುಗೊಳ್ಳಬೇಕಾದರೆ ನಿಮ್ಮೆಲ್ಲರ ಪ್ರಯತ್ನ ಅತ್ಯವಶ್ಯಕ ಎಂಬುದನ್ನು ಮನಗಾಣಬೇಕು.

ಅಬ್ರಹಾಂಲಿಂಕನ್ನನು ಪ್ರಜಾಪ್ರಭುತ್ವವನ್ನು ವ್ಯಾಖ್ಯಾನಿಸುವಾಗ ಅದು ಜನರ, ಜನರಿಂದ, ಜನತೆಗಾಗಿ ಇರುವ ಆಳ್ವಿಕೆ ಎಂದು ನುಡಿದನು. ಬಸವ ಧರ್ಮದ ಉಗಮ ಪ್ರಗತಿಗಳನ್ನು ಗಮನಿಸಿದಾಗಲೂ ಇದೇ ವ್ಯಾಖ್ಯಾನವು ಸಮಂಜಸವಾಗುತ್ತದೆ. ವಿಶ್ವಗುರು ಬಸವಣ್ಣನವರ ನೇತೃತ್ವದಲ್ಲಿ ಜನರೇ ಕಟ್ಟಿದ ಧರ್ಮವಿದು; ಆ ನಂತರವೂ ಜನರಿಂದಲೇ ಪೋಷಣೆಗೊಂಡು ಬಂದುದು. ರಾಜಾಶ್ರಯವಿಲ್ಲದೆ, (ಪುರೋಹಿತ ಪ್ರೇರಿತ ರಾಜನ ವಿರೋಧವನ್ನು ಕಟ್ಟಿಕೊಂಡು) ಪುರೋಹಿತ ಶಾಹಿಯ ಬೆಂಬಲವಿಲ್ಲದೆ ಕಾಯಕ ಜೀವಿಗಳು ಮತ್ತು ಜನಸಾಮಾನ್ಯರಿಂದಲೇ ಪೋಷಿಸಲ್ಪಟ್ಟು ಬೆಳೆದು ಬಂದ ಧರ್ಮ

ವಿದು. ಇನ್ನು ಜನಸಾಮಾನ್ಯನ ಅಂತರಂಗದ ಮೂಕ ರೋದನವನ್ನಾಲಿಸಿ, ಅವನ ಕಣ್ಣೀರನ್ನೊರೆಸಲು, ಅವನನ್ನು ಸಂತೈಸಲು ಅವನಿಗೆ ಆಶ್ವಾಸನೆ ನೀಡಲೆಂದೇ ಇರುವ ಧರ್ಮವಿದು. ಹೀಗಾಗಿಯೇ ಇದರ ಪೋಷಣೆ. ಅಭಿವೃದ್ಧಿಗಳು ಜನಸಾಮಾನ್ಯರ ಕರ್ತವ್ಯವೇ ಆಗಿದೆ. ಆದ್ದರಿಂದ ಇಂದು ಪ್ರತಿಯೊಬ್ಬರು ತನು ದಾಸೋಹ, ಮನದಾಸೋಹ, ಧನ ದಾಸೋಹಗಳಿಗೆ ಅಣಿಯಾಗಬೇಕಾಗಿದೆ.

❖ ಆಡಿದಡೇನು, ಹಾಡಿದಡೇನು, ಓದಿದಡೇನು
ತ್ರಿವಿಧ ದಾಸೋಹವಿಲ್ಲದನ್ನಕ್ಕ ?
ಆಡದೆ ನವಿಲು ? ಹಾಡದೆ ತಂತಿ ? ಓದದೆ ಗಿಳಿ ?
ಭಕ್ತಿ ಇಲ್ಲದವರನೊಲ್ಲ ಕೂಡಲ ಸಂಗಮದೇವ–ಬಸವ ಗೀತೆ 207

❖ ತ್ರಿವಿಧ ದಾಸೋಹದಲ್ಲಲ್ಲದೆ ಕಾಣಬಾರದು ಕೂಡಲ ಸಂಗಮದೇವನ 208

❖ ಮಾತಿನ ಮಾತಿನಲ್ಲಪ್ಪುದೇ ಭಕ್ತಿ ?
ಮಾಡಿ ತನು ಸವೆಯದನ್ನಕ್ಕ ಮನ ಸವೆಯದನ್ನಕ್ಕ
ಧನ ಸವೆಯದನ್ನಕ್ಕ ಅಪ್ಪುದೇ ಭಕ್ತಿ ?–ಬಸವ ಗೀತೆ-210

ಹೀಗೆ ಗುರು ಬಸವಣ್ಣನವರು ತಮ್ಮ ವಚನಗಳಲ್ಲಿ ದಾಸೋಹ ಕುರಿತು ಒತ್ತಿ ಒತ್ತಿ ಹೇಳಿದ್ದಾರೆ.

ತ್ರಿವಿಧ ದಾಸೋಹವೆಂದರೇನು ? ಗುರು-ಲಿಂಗ-ಜಂಗಮ ಎಂಬುವ ಪೂಜಾರ್ಹ ವಸ್ತುಗಳಿಗೆ ತನು–ಮನ–ಧನವನ್ನು ಸಮರ್ಪಿಸುವುದು ತ್ರಿವಿಧ ದಾಸೋಹ. ಅಷ್ಟೇ ಅಲ್ಲ ಗುರುವಿಗೂ ತನು-ಮನ-ಧನಗಳನ್ನೂ, ಜಂಗಮಕ್ಕೂ ತನು-ಮನ-ಧನಗಳನ್ನು ಸಮರ್ಪಿಸಬೇಕು. (ಬಸವ ಗೀತೆ–206)

ಗುರುವಿಗೆ ತನುವನ್ನು ಸಮರ್ಪಿಸುವುದೆಂದರೆ ಧರ್ಮದ ಆದ್ಯ, ಗುರು ಬಸವಣ್ಣನವರ ತತ್ತ್ವಗಳನ್ನು ಅಧ್ಯಯನ ಮಾಡಲು, ಪ್ರಚಾರವನ್ನು ಮಾಡಲು ತನ್ನನ್ನು ತಾನು ಸಮರ್ಪಿಸಿಕೊಳ್ಳಬೇಕು. ಪೂರ್ಣಾವಧಿ ಕಾರ್ಯಕರ್ತರಾಗದಿದ್ದರಷ್ಟೇ ಅಲ್ಪಾವಧಿ ಕಾರ್ಯಕರ್ತರಾಗಿ ತನ್ನ ಸುತ್ತಲಿನವರಿಗೆ, ತನ್ನ ಕುಟುಂಬ ವರ್ಗದವರಿಗೆ ಬಂಧು ಬಳಗದವರಿಗಾದರೂ ತತ್ತ್ವ ಪ್ರಚಾರ ಮಾಡಬೇಕು.

ತನು ದಾಸೋಹ :

1) ಶರಣ ಮೇಳದ ಮಹತ್ವ, ಅಗತ್ಯತೆ ಕುರಿತು ಹೆಚ್ಚು ಹೆಚ್ಚು ಜನರಲ್ಲಿ ಪ್ರಚಾರ ಮಾಡಿರಿ. ಹೆಚ್ಚು ಜನರು ಬರುವಂತೆ ಪ್ರೇರೇಪಿಸಿರಿ.

2) ಶರಣ ಮೇಳದ ಯಶಸ್ಸಿಗೆ ಎಲ್ಲರೂ ತಮ್ಮ ಕೈಲಾದಷ್ಟು ಧನಸಹಾಯ ಮಾಡಲು ಪ್ರೇರೇಪಿಸಿರಿ. ಅವರು ಸ್ವಯಂ ಪ್ರೇರಣೆಯಿಂದ ಕೊಟ್ಟುದನ್ನು ಸಂಗ್ರಹಿಸಿ ಕಳಿಸಿರಿ. ಮನೆಮನೆಗಳಲ್ಲೂ ಮುಡಿಪು ತೆಗೆದಿಟ್ಟು ವರ್ಷಕ್ಕೊಮ್ಮೆ ಕೊಡುವಂತಹ ಉತ್ತಮ ಪರಿಪಾಠ ಬೆಳೆಸಲು ತಿಳಿಸಿರಿ.

4) ಎಲ್ಲಕ್ಕೂ ಮುಖ್ಯವಾದುದೇಂದರೆ ನೀವು ಬಂದು ಸ್ವತಃ ಶರಣಮೇಳದಲ್ಲಿ ಸ್ವಯಂ ಸೇವಕರಾಗಿ ದುಡಿಯುವುದು. ನಮಗಿರುವ ಬಸವ ಭಕ್ತಿ–ಬಸವ ನಿಷ್ಠೆಗಳನ್ನು ವ್ಯಕ್ತಪಡಿಸುವ ವಿಧಾನವೆಂದರೆ ಎಲ್ಲೆಡೆಯಿಂದ ಬರುವ ಶರಣಬಂಧುಗಳ ಸೇವೆ. ಕೈಲಾದಷ್ಟು ಅನುಕೂಲತೆಗಳನ್ನು ಅವರಿಗೆ ಮಾಡಿಕೊಡುವುದು. "ಸ್ಥಾವರ ಭಕ್ತಿ ಬಲು ಸುಲಭ, ಜಂಗಮ ಭಕ್ತಿ ಬಲು ಕಠಿಣ" ಎಂದೇ ಗುರು ಬಸವಣ್ಣನವರು ಎಚ್ಚರಿಸಿರುವುದನ್ನು ತಿಳಿದು, ಶರಣರ ಸೇವೆಗೆ ಅಣಿಯಾಗುವುದು,

ಮನದಾಸೋಹ :

ಲಿಂಗಕ್ಕೆ ಮನವನ್ನು ಅರ್ಪಿಸಬೇಕು. ಲಿಂಗದ ಸ್ಥಾನದಲ್ಲಿ ದೇವರು, ಧರ್ಮ ವಚನ ವಾಙ್ಮಯ, ಧರ್ಮಗುರು ಬಸವಣ್ಣ–ಹೀಗೆ ಹಲವಾರು ಉದಾತ್ತ ಮೌಲ್ಯಗಳನ್ನು ಇರಿಸಿಕೊಂಡು ಮನಸ್ಸನ್ನು ಉದಾತ್ತ ಚಿಂತನೆಯಲ್ಲಿ ತೊಡಗಿಸಬೇಕು. ಗುರು (ಬಸವಣ್ಣ)-ಲಿಂಗ (ಜಗತ್ಕರ್ತ)-ಜಂಗಮ (ಸಮಾಜ-ಸಮುದಾಯ-ಜ್ಞಾನಿಗಳು) ಗಳಲ್ಲಿ ಭಕ್ತಿ-ನಿಷ್ಠೆ-ಔದಾರ್ಯಗಳನ್ನು ಕ್ರಮವಾಗಿ ಬೆಳೆಸಿಕೊಳ್ಳಬೇಕು.

ಧನ ದಾಸೋಹ :

ಪ್ರತಿಯೊಂದು ಕೆಲಸಗಳನ್ನು ಮಾಡಬೇಕಾದರೂ ಹಣದ ನೆರವು ಬೇಕು, "ಕೇಳಿಸಿಕೊಳ್ಳದೆಯೇ ಕೊಡುವವನು ಉತ್ತಮನು, ಕೇಳಿಸಿಕೊಂಡು ಕೊಡುವವನು ಮಧ್ಯಮನು, ಕೇಳಿಸಿಕೊಂಡೂ ಕೊಡದವನು ಅಧಮನು" ಎಂದು ಸರ್ವಜ್ಞನು ಹೇಳುವಂತೆ ಪ್ರೌಢರಾದ ನೀವು ಸ್ವಯಂ ಪ್ರೇರಣೆಯಿಂದ ಹಣವನ್ನು ಕಳುಹಿಸಿಕೊಡಿರಿ. ಗುರುವಿನ ಕಾರ್ಯವಿದರಲ್ಲಿ ಸಂಕೋಚಪಡದೆ ಇತರರನ್ನು ಕೇಳಿರಿ. ಮೂಢಭಕ್ತಿಯಿಂದ ಪ್ರೇರಿತರಾದವರು ಅಥವಾ ದುಶ್ಚಟ-ದುರ್ಗುಣಗಳ ದಾಸರಾದವರು, ಅಹಂಭಾವದಿಂದ ಬದುಕುತ್ತ ಸಮುದಾಯ ಜೀವನದ ಮಹತ್ವ ತಿಳಿಯದವರು ಹಣವನ್ನು ಕೊಡಲಿಕ್ಕಿಲ್ಲ; ಕೇಳಿದವರನ್ನು ಅಪಹಾಸ್ಯಮಾಡಿ, ವ್ಯಂಗ್ಯೋಕ್ತಿಗಳನ್ನಾಡಬಹುದು. ಅಂಥ ಅನುಭವಗಳನ್ನೂ ದೇವನಿಗೆ ಅರ್ಪಿಸಿಬಿಡಿರಿ. "ಹನಿಗೂಡಿದರೆ ಹಳ್ಳ, ಕಾಳು ಕೂಡಿದರೆ ರಾಶಿ" ಎಂಬುದನ್ನರಿತು ಕೈಲಾದಷ್ಟನ್ನು ಸಂಗ್ರಹಿಸಿ ಅಥವಾ ದಾನಿಗಳಿಗೇ ನೇರವಾಗಿ ಕಳಿಸಿಕೊಡಲು ಪ್ರೇರೇಪಿಸಿರಿ.

ಅನುಕೂಲತೆಗಳನ್ನು ಅಗಣ್ಯವಾಗಿ ತಿಳಿಯಿರಿ.

ಕೆಲವು ಜನರು ಇಡೀ ಜೀವನ ಪರ್ಯಂತರ ಉಂಡುಟ್ಟು ತಿನ್ನುವುದೊಂದನ್ನೇ ಮಾಡಿರುತ್ತಾರೆ. ಅರ್ಥಗಳಿಗೆಯಷ್ಟು ಎಳ್ಳುಕಾಳಷ್ಟು ಅನಾನುಕೂಲತೆಯನ್ನು ಸಹಿಸರು, ಮೆಕ್ಕಾದಂತಹ ಕ್ಷೇತ್ರಕ್ಕೆ ಹೋದಾಗ ಅಲ್ಲಿ ಕುಡಿಯುವ ನೀರು ಸಹ ದುರ್ಲಭ ಮತ್ತು ತುಟ್ಟಿ ಎಂದು ಕೇಳುತ್ತೇವೆ. ಹಾಗಿರುವಾಗ ಮೂರು-ನಾಲ್ಕು ದಿವಸಗಳ ಕಾಲ ಪರಿಶ್ರಮ ಪಡಲು ಸಿದ್ಧರಾಗಬೇಕು. ಏನೂ ಇಲ್ಲದ ಮೈದಾನಗಳಲ್ಲಿ, ಸರ್ಕಾರಿ ಪ್ರವಾಸಿ ಮಂದಿರದಲ್ಲಿ ಕಾರ್ಯಾಲಯ ಮಾಡಿಕೊಂಡು ಮೊದಲ ಶರಣಮೇಳವನ್ನು ಮಾಡಿದ್ದಾಯಿತು. ಈ ವರ್ಷ ಪರಿಸ್ಥಿತಿ ಬಹಳಷ್ಟು ಸುಧಾರಿಸಿದೆ. ವರ್ಷದಿಂದ ವರ್ಷಕ್ಕೆ

ಅನಾನುಕೂಲತೆ ಕಮ್ಮಿ ಮಾಡಿ, ಅನುಕೂಲತೆ ಹೆಚ್ಚುಮಾಡಿ ಜನರಿಗೆ ಸೌಲಭ್ಯ ಒದಗಿಸಿಕೊಡಬೇಕೆಂಬುದೇ ನಮ್ಮ ಉದ್ದೇಶ. ಕೆಲವು ಜನರು ಕೊಟ್ಟ ಕಾರಣ ನೋಡಿದರೆ ನಮಗೆ ನಗು ಬರದೇ ಇರದು.

1. ಮಾತಾಜಿಯವರು ನಮ್ಮನ್ನು ವೈಯಕ್ತಿಕವಾಗಿ ಭೇಟಿಯಾಗಲಿಲ್ಲ; ಮಾತನಾಡಿಸಲಿಲ್ಲ ಎಂಬುದು ಒಂದು ದೂರು. ಅತ್ಯಂತ ಒತ್ತಡದ ಆ ಕಾರ್ಯಕ್ರಮದಲ್ಲಿ ಪ್ರತ್ಯೇಕವಾಗಿ ಮಾತನಾಡಿಸಲು ಸಮಯ ದೊರೆಕೀತೆ? ಹಾಗೆ ಭೇಟಿಯಾಗಬೇಕೆನ್ನುವವರು ಇನ್ನೊಂದು ದಿವಸ ಉಳಿಯಬಹುದಾಗಿತ್ತು.

2. ಉತ್ತರ ಕರ್ನಾಟಕದ ರೊಟ್ಟಿ ನಮಗೆ ಸರಿ ಬರದು–ಹಳೇ ಮೈಸೂರಿನ ಕೆಲವರ ದೂರು. ರೊಟ್ಟಿ ಬೇಕಾದವರು ನೀಡಿಸಿಕೊಳ್ಳಬಹುದೇ ವಿನಾ ಅದು ಕಡ್ಡಾಯವಲ್ಲ. ಅನ್ನವೇ ಅಂಥ ಬೃಹತ್ ಸಮಾರಂಭಗಳಲ್ಲಿ ಮುಖ್ಯ ಆಹಾರವಾಗಿ ಕೊಡಲ್ಪಡುವುದು.

ದುರ್ಗಮ ಅರಣ್ಯದಲ್ಲಿ, ಎಡಬಿಡದ ಮಳೆಯು ಸುರಿತವ ಮಧ್ಯೆ ಬಯಲು ಸೀಮೆಯಲ್ಲಿ ಹುಟ್ಟಿ ಬೆಳೆದ ಶರಣರು ಸಾಹಿತ್ಯ ರಕ್ಷಣೆಗಾಗಿ ವಾಸಮಾಡಬೇಕಾಯಿತಲ್ಲವೆ? ಅವರು ಎಂತಹ ಕಷ್ಟಕಾರ್ಪಣ್ಯ ಎದುರಿಸಿರಬಹುದು. ಇಂದಿನ ಜನರು ನೂರರಲ್ಲೊಂದು ಭಾಗದಷ್ಟು ಕಷ್ಟಪಡುವುದು ಬೇಕಾಗದು. ಅಷ್ಟೊಂದು ಸಾರಿಗೆ ಅನುಕೂಲ, ವಿದ್ಯುತ್, ತಾತ್ಕಾಲಿಕ ತಂಗುದಾಣಗಳ ವ್ಯವಸ್ಥೆ ಇರುತ್ತದೆ.

3. ಮತ್ತೆ ಕೆಲವರು ಕಲಾವಿದರು, ಭಾಷಣಕಾರರು ತಮಗೆ ವೇದಿಕೆಯ ಮೇಲೆ ತಮ್ಮ ಪ್ರತಿಭೆ ಪ್ರದರ್ಶಿಸಲು ಅಹ್ವಾನವಿಲ್ಲವೆಂದು ಶರಣ ಮೇಳಕ್ಕೆ ಬರಲು ಆಸ್ಥೆ ತೋರಿಸುವದಿಲ್ಲ. ಶರಣಮೇಳವು ಮುಖ್ಯವಾಗಿ ತಾತ್ತ್ವಿಕ ಕಾರ್ಯಕ್ರಮ ದೊರೆಯುವ ಮೂರು ದಿವಸಗಳಲ್ಲಿ ಇಡೀ ಸಮಾಜಕ್ಕೆ ಸಂಬಂಧಿಸಿದ ವಿಷಯ ಕುರಿತು ಚಿಂತನೆ ನಡೆದಿರುತ್ತದೆ. ಕಲಾವಿದರಿಗೆ ಹೆಚ್ಚಿನ ಸಮಯಾವಕಾಶ ನೀಡಲು ಸಾಧ್ಯವಾಗದು. ತಾವು ಧರ್ಮಾನುಯಾಯಿಗಳು, ಕಾರ್ಯಕ್ರಮದಲ್ಲಿ ನಡೆಯುವ ಜ್ಞಾನದಾಸೋಹದಲ್ಲಿ ತಾವು ಭಾಗಿಗಳಾಗಬೇಕು ಎಂಬ ಮನೋಭಾವ ಹೊಂದಬೇಕೇ ವಿನಾ ತಮಗೆ ಅವಕಾಶ ಸಿಕ್ಕದಿದ್ದ ಮಾತ್ರಕ್ಕೆ ಕಾರ್ಯಕ್ರಮಕ್ಕೆ ಬರಬಾರದು ಎಂಬ ತಪ್ಪು ತಿಳುವಳಿಕೆಯನ್ನು ತೊರೆಯಬೇಕು. ಅಂದು ಪರಮಾತ್ಮನ ಮಹಾಮನೆಯ ಮಗನಾಗಲು ಬಸವಣ್ಣನವರು ಯತ್ನಿಸಿದಂತೆ ಇಂದು ಗುರು ಬಸವಣ್ಣನವರ ಮನೆಯ ಮಕ್ಕಳು ನಾವಾಗಬೇಕು. ಅಂದಾಗ ಮಾತ್ರ ಅಭಿಮಾನಪೂರ್ವಕವಾಗಿ, ಸಮರ್ಪಣ ಮನೋಭಾವದಿಂದ ದುಡಿಯಲು ಸಾಧ್ಯವಾಗುತ್ತದೆ.

ಇಂದು ಶರಣ ಮೇಳ ಒಂದೇ ಬಸವ ತತ್ತ್ವಾನುಯಾಯಿಗಳ, ಲಿಂಗವಂತ ಧರ್ಮೀಯರ ಅಂತರರಾಜ್ಯ (ರಾಷ್ಟ್ರೀಯ) ವೇದಿಕೆಯಾಗಿದೆ. ಪ್ರಚಾರವು ಅಧಿಕವಾದಂತೆಲ್ಲ ಮುಂದೆ ಅಂತರರಾಷ್ಟ್ರೀಯ ವೇದಿಕೆಯೂ ಆಗುವ ಕಾಲ ಬಂದೀತು. ಅದಕ್ಕಾಗಿ ತನು ಮುಟ್ಟಿ ಮನ ಮುಟ್ಟಿ ದುಡಿಯೋಣ. —**ಮಾತಾಜಿ**, ಕಾರ್ಯಾಧ್ಯಕ್ಷೆ

ಶರಣ ಮೇಳ - ಏಕೆ ?

ವಿಶ್ವಗುರು ಬಸವಣ್ಣನವರ ವಿದ್ಯಾಭೂಮಿ, ತಪೋಸ್ಥಾನ, ಐಕ್ಯಕ್ಷೇತ್ರ ಕೂಡಲ ಸಂಗಮದಲ್ಲಿ ನಡೆಯುವ ಶರಣ ಮೇಳವು ವಾರ್ಷಿಕ ಕಾರ್ಯಕ್ರಮ. ಉತ್ಸವ ಸಮಿತಿಯ ಪ್ರಧಾನ ಕಾರ್ಯದರ್ಶಿ ಶರಣ. ಪುಟ್ಟರುದ್ರಪ್ಪನವರು ದೇಣಿಗೆ ಸಂಗ್ರಹಕ್ಕೆ ಹೋದಾಗ ಒಬ್ಬರು ಶ್ರೀಮಂತರು ಹೇಳಿದರಂತೆ "ಇದು ಪ್ರತಿವರ್ಷವೂ ಇರುವುದೋ? ನಾವು ಒಂದೇ ವರ್ಷವೇನೋ ಎಂದುಕೊಂಡು ಉದಾರವಾಗಿ ಕೊಟ್ಟಿದ್ದೆವು."

ಇನ್ನೊಬ್ಬರು ಸಿರಿವಂತರು ಅಂದರಂತೆ, ' ಶರಣ ಮೇಳ ಮಾಡುವ ಬದಲು ಮೆಡಿಕಲ್ ಕಾಲೇಜನ್ನು ತೆರೆಯುವಂತಹ ಕೆಲಸ ಕೈಗೊಳ್ಳಬೇಕಿತ್ತು.' ಈ ಮಾತುಗಳನ್ನಾಡಿದವರು ಬಹಳ ದೊಡ್ಡವರು– ಸಮಾಜದ ಕಣ್ಣಿನಲ್ಲಿ. ಆದ್ದರಿಂದ ಅವರ ಹೆಸರುಗಳನ್ನು ಕೊಡುವುದಿಲ್ಲ.

ಪ್ರತಿವರ್ಷವೂ ಸತತವಾಗಿ ಮಾಡುವುದರಿಂದ ಸಮಾಜ, ತತ್ತ್ವಗಳು ಜೀವಂತವಾಗುತ್ತವೆಯೇ ವಿನಾ ಎಂದೋ ಒಂದು ದಿನ ಉತ್ಸವ, ಮೆರವಣಿಗೆ ಆಟಾಟೋಪ ಮಾಡುವುದರಿಂದಲ್ಲ. ನಮ್ಮ ಸಮಾಜಕ್ಕೆ ಕೆಲವು ವಿಚಿತ್ರ ಅಭ್ಯಾಸಗಳಿವೆ. ಲಕ್ಷಾಂತರ ರೂಪಾಯಿ ಖರ್ಚು ಮಾಡಿ ಯಾರನ್ನೋ ಹೊತ್ತು ಮೆರೆಸುತ್ತಾರೆ. ಮುಗ್ಧ ಭಕ್ತರು ಆ ವೈಭವ ನೋಡಿ ಸಮಾಧಾನ ಪಟ್ಟುಕೊಳ್ಳುತ್ತಾರೆ : ಮತ್ತೆ ಕೆಲವರು ಕಿಸೆ ತುಂಬಿಕೊಳ್ಳುತ್ತಾರೆ. ಯಾವುದಾದರೊಂದು ವಿಚಾರಧಾರೆಗೆ, ದೃಷ್ಟಿಕೋನ ಬೆಳೆಸಿಕೊಳ್ಳಲಿಕ್ಕೆ ಜನರನ್ನು ಅಣಿ ಮಾಡುವವರೇ ಎಂದರೆ ಖಂಡಿತಾ ಇಲ್ಲ.

ಜನರನ್ನು ಸಮ್ಮೇಳನಗಳ ಮೂಲಕ ಒತ್ತಟ್ಟಿಗೆ ತಂದರೆ ಸಾಲದು, ವಿಚಾರಧಾರೆಯನ್ನು, ದೃಷ್ಟಿಕೋನವನ್ನು, ಬೆಳೆಸುವ ಕಮ್ಮಟ–ಕಾರ್ಯಾಗಾರಗಳಾಗಿ ಈ ಸಮ್ಮೇಳನಗಳು ಕೆಲಸ ಮಾಡಬೇಕು : ಒಂದು ಆದರ್ಶ ಸಮಾಜ–ರಾಷ್ಟ್ರನಿರ್ಮಾಣಕ್ಕೆ ಅಣಿಗೊಳಿಸಬೇಕು. ಒಳ್ಳೆಯದೇ ಇರಲಿ, ಕೆಟ್ಟದ್ದೇ ಇರಲಿ, ಕಮ್ಯೂನಿಷ್ಟರಿಗೆ ಒಂದು ಸಿದ್ಧಾಂತವಿದೆ, ಭಾ.ಜ.ಪದವರಿಗೆ ಒಂದು ಸಿದ್ಧಾಂತವಿದೆ. ಆದರೆ ಈ ಎರಡೂ ವಿಚಾರಧಾರೆ ಭಾರತದಲ್ಲಿ ತಮ್ಮ ಪ್ರಖರತೆ ಕಳೆದುಕೊಳ್ಳುತ್ತಿವೆ: ಇಂದಲ್ಲದಿದ್ದರೆ ಮುಂದೆ ಕಳೆದುಕೊಳ್ಳುತ್ತವೆ. ರಷ್ಯ ಮುಂತಾದಲ್ಲಿ ಶಕ್ತಿಶಾಲಿಯಾಗಿ ಕಮ್ಯೂನಿಸಮ್ ಇದ್ದಾಗಲೇ ಭಾರತದಲ್ಲಿ ಅದರ ಪ್ರಭಾವ ಅಷ್ಟಕ್ಕಷ್ಟೆ. ಇನ್ನು ಐರೋಪ್ಯ ದೇಶಗಳಲ್ಲಿಯೇ ಅದು ಸೋತು ಸೊರಗುತ್ತಿರುವಾಗ ಭಾರತದಲ್ಲಿ ಬೆಳೆಯುವುದು ಕಷ್ಟ. ಇದಕ್ಕೆ ಕಾರಣ ಭಾರತೀಯರ ಮನಸ್ಸು ದೇವರನ್ನು ನಂಬುವ ಮನಸ್ಸಾಗಿರುವುದು. ಇನ್ನು ಭಾ.ಜ.ಪದವರಿಗೆ ಒಂದು ಸಿದ್ಧಾಂತ, ದೃಷ್ಟಿಕೋನ ಇರುವುದು ನಿಜವಾದರೂ ಅದು ನಿಧಾನವಾಗಿ ಹಿಂದೂತ್ವದ ಹೆಸರಿನಲ್ಲಿ ವೈದಿಕ, ವೈಷ್ಣವ ಹಿಡಿತದಲ್ಲಿ ಸಿಕ್ಕಿಕೊಳ್ಳುತ್ತಿರುವುದು ಬಹಳ ಜನರ ಮನಸ್ಸಿಗೆ ನಾಟುತ್ತಲಿದೆ. ಹೀಗಾಗಿ ಅತ್ಯಂತ ಸಂಕೀರ್ಣವಾದ ಬಹು ಬಗೆಯ ಧರ್ಮಗಳು, ಜಾತಿಗಳು ರೂಢಿಗೊಂಡಿರುವ ಈ ದೇಶಕ್ಕೆ ಪ್ರಗತಿಪರ ಚಿಂತನೆಯ, ವಿಶಾಲ ದೃಷ್ಟಿಕೋನ, ಇಂಬಿಟ್ಟುಕೊಳ್ಳುವ ಗುಣ ಉಳ್ಳ ಒಂದು ವಾದ (*ism*), ಒಂದು ಸಿದ್ಧಾಂತ ಅಗತ್ಯವಾಗಿ ಬೇಕಾಗಿದೆ. ಈ ಅಗತ್ಯವನ್ನು ಮಹಾಮುತ್ಸದ್ದಿ ಬಸವಣ್ಣನವರು ತುಂಬಿಕೊಡಬಲ್ಲರು. ಆದರ್ಶ ಪ್ರಧಾನಿಯಾಗಿ, ಶ್ರೇಷ್ಠ ಮುತ್ಸದ್ದಿಯಾಗಿ, ಮುನ್ನೋಟದ ಮಹಾಚಿಂತಕನಾಗಿ ಬಸವಣ್ಣನವರು ಎಲ್ಲರಿಗೆ ಬೇಕು. ಇಂಥ ವ್ಯಕ್ತಿ ನಮ್ಮ ಅಪ್ಪನಾಗಿ, ಅರ್ಥಾತ್ ಧರ್ಮ ಗುರುವಾಗಿ ನಮಗೆ ಬೇಕು.

ಸಮಾಜ ಪರಿವರ್ತನೆ, ಸೇವೆಯಲ್ಲಿ ತನ್ನನ್ನು ತಾನು ತೊಡಗಿಸಿಕೊಂಡ ಒಬ್ಬ ತಂದೆಗೆ ಮಕ್ಕಳು ಹೀಗೆ ಹೇಳುವರು, "ಅಪ್ಪಾ, ನೀನು ಎಲ್ಲರ ಬಗ್ಗೆ ಕಾಳಜಿ ವಹಿಸುವೆ. ಮನೆ ಮಕ್ಕಳನ್ನು ಮಾತಾಡಿಸಲು ಪುರುಷೊತ್ತಿಲ್ಲ" ಎಂದಾಗ ಆತ ಮುಗುಳ್ನಗುವನು. ಸಮಷ್ಟಿಯ ಸಮಗ್ರ ಉದ್ಧಾರ ಆದಾಗ ಸಮಷ್ಟಿಯ ಒಂದಂಗವಾದ ಈತನ ಜನರು ಉದ್ಧಾರವಾಗುವುದಿಲ್ಲವೇ? ಇದನ್ನಾತ ಬಲ್ಲ. ಹಾಗೆ ಇಂದು ನಾವು ಮಹಾಮಾನತಾವಾದಿ ಬಸವಣ್ಣನವರ ವಿಚಾರವನ್ನು ಹೆಚ್ಚುಹೆಚ್ಚು ಪ್ರಚಾರ ಮಾಡಿ ಆ ವಿಚಾರದ ಬೆಳಕನ್ನು ಚೆಲ್ಲುತ್ತ ಹೋದಂತೆ ಜನರ ದೃಷ್ಟಿಕೋನ, ನಂಬಿಕೆಗಳಲ್ಲಿ ಸ್ವಾಭಾವಿಕವಾಗಿ ಬದಲಾವಣೆಯಾಗುತ್ತದೆ.

" ಶರಣ ಮೇಳ "– ಒಂದು ಜಾತ್ರೆಯಲ್ಲ, ಕೇವಲ ಸಮ್ಮೇಳನವಲ್ಲ; ಬಸವ ತತ್ತ್ವದ ಸುಳುಹು-ಹೊಳವು, ಆಳ-ಹರಹುಗಳನ್ನು ಕುರಿತು ಚಿಂತಿಸುವ ಸಮಾವೇಶ. ಇದರ ಇನ್ನೊಂದು ಮಹತ್ವಪೂರ್ಣ ಗುರಿ **"ಸಂಘಟನೆ"**. ನಮ್ಮಲ್ಲಿ ಕೆಲವರು ಸಂಘ-ಸಂಸ್ಥೆ ನಡೆಸುವವರು, ನಿವೃತ್ತರು, ಸಿರಿವಂತರು ಗೊಣಗುವುದುಂಟು. "ಈ ಸಮಾಜ ಹಾಗೇ ಹೀಗೆ, ಸಂಘಟನೆಯೇ ಇಲ್ಲ. ನಮ್ಮ ಜನರಿಗೆ ಸಂಘ-ಸಂಸ್ಥೆಗಳಿಗೆ ಹೇಗೆ ಪ್ರೋತ್ಸಾಹಕೊಡಬೇಕೆಂಬುದೇ ಇಲ್ಲ." ಎಂದು ಗಂಟೆಗಟ್ಟಳೆ ಮನೆಯಲ್ಲಿ ಕುಳಿತು ಮಾತನಾಡುವರು. ಆದರೆ 'ಶರಣ ಮೇಳ' ವರ್ಷದಿಂದ ವರ್ಷಕ್ಕೆ ಹೆಚ್ಚು ಜನರನ್ನು ಸಂಘಟಿಸುತ್ತಿದೆ, ಒಂದು ವೇದಿಕೆಗೆ ತರುತ್ತಿದೆ, ವಿಚಾರ ಪರಿವರ್ತನೆ ಮಾಡುತ್ತಿದೆ ಎಂದರಿತು, ಸಹಕರಿಸುವ ಮನೋಭಾವವೇ ಬಹಳಷ್ಟು ಜನರಲ್ಲಿ ಇಲ್ಲ. ಇವರು ಕಟ್ಟಿರುವ ಸಂಘ ಸಂಸ್ಥೆಗಳ ಮೂಲಕ, ಕಡೆಗೆ ವೈಯಕ್ತಿಕವಾಗಿಯಾದರೂ ಇವರು ಸಹಕರಿಸಬಹುದು.

ಶರಣ ಮೇಳ ಸಂಘಟಿಸ ಬಯಸಿರುವುದು ಲಿಂಗಾಯತ ಸಮಾಜವನ್ನು ಮಾತ್ರವಲ್ಲ ಶರಣ ಸಮಾಜವನ್ನು. ಯಾವುದೋ ಶತಮಾನದಲ್ಲಿ ಇಷ್ಟಲಿಂಗ ಧಾರಣೆ ಮಾಡಿಕೊಂಡು, ಕೆಲವರು ಕೇವಲ ಅದನ್ನೊಂದು ಕುರುಹಾಗಿ ಧರಿಸಿಕೊಂಡು ಒಳಗಣ ಸತ್ವಕಳೆದುಕೊಂಡಿರುವರು. ಇನ್ನು ಕೆಲವರು ಕುರುಹು–ಅರುಹು ಎರಡನ್ನೂ ಬಿಟ್ಟು ತಾವು ಲಿಂಗಾಯತ ಜಾತಿಯಲ್ಲಿ ಹುಟ್ಟಿದವರು ಎಂದು ಹೇಳಿಕೊಳ್ಳುವವರು. ಗುರು

ಬಸವಣ್ಣನವರ ತತ್ತ್ವ, ಆದರ್ಶ, ದೃಷ್ಟಿಕೋನ ಅರಿಯದೆ ಇಷ್ಟಲಿಂಗ ಧರಿಸಿದರೆ ಅದು ಒಂದು ಕುರುಹಾಗಿಯಷ್ಟೆ ಉಳಿಯುತ್ತದೆ. ಇಂಥ ಜನರಲ್ಲಿ ಒಂದು ತಾತ್ತ್ವಿಕ ಜೀವಂತಿಕೆ ತುಂಬಬೇಕಾಗಿದೆ. ಇನ್ನು ಅನೇಕ ಜನ ಲಿಂಗಾಯತೇತರ, ವಿಚಾರಶೀಲ ಜನರಿದ್ದಾರೆ. ಅವರಿಗೆ ನಾವಿಂದು ಮನವರಿಕೆ ಮಾಡಿಕೊಡಬೇಕಾದುದು ಗುರು ಬಸವಣ್ಣನವರ ಔದಾರ್ಯ, ಕಳಕಳಿ, ಹೃದಯ ವೈಶಾಲ್ಯವನ್ನು. ಒಂದು ದಿವಸ ಶರಣ ಕಕ್ಕಯ್ಯ ಪೋಳರು ಕೂಡಲ ಸಂಗಮಕ್ಕೆ ಬಂದಿದ್ದರು. 'ಸ್ವಾಭಿಮಾನ ಜಾಥಾ' ಬರಲಿರುವ ಬಗ್ಗೆ ಕೆಲವು ವಿಷಯ ತಿಳಿಸಿದರು. ಅವರೊಡನೆ ಬಂದಿದ್ದ ದಲಿತ ಕಾರ್ಯ ಕರ್ತರ ಹೆಸರು ಹೇಳಿದಾಗ ಬಸಣ್ಣ ಚಲವಾದಿ, ಬಸವರಾಜ ನಡುವಿನಮನಿಹೀಗೆ ಹೇಳಿ ದರು. ಇವರ ವಿಚಾರಧಾರೆ ಏನೇ ಇರಲಿ, ಇವರುಗಳಿಗೆ ಹೆಸರಿಟ್ಟ ಇವರ ಮುಗ್ಧ ತಾಯಿ ತಂದೆಯರ ನೆನಪು ನನಗಾಯಿತು. ಅವರಿಗೆ ಯಾವ ವಾದ, ಸಿದ್ಧಾಂತವೂ ತಿಳಿದಿರಲಿಕ್ಕಿಲ್ಲ. ಆದರೆ ಬಸವಣ್ಣನವರು ಅವರಿಗೆ ತಮ್ಮವರಾಗಿ ಕಂಡಿದ್ದಾರೆ. ಬಸವಲಿಂಗಪ್ಪನವರ ತಾಯಿತಂದೆಗಳನ್ನೇ ಕುರಿತು ಚಿಂತಿಸಿದರೂ, ಆ ಮುಗ್ಧ ಮನಸ್ಸುಗಳು ಬಸವಣ್ಣನವರನ್ನು ಯಾವ ಪೂಜ್ಯ ಭಾವನೆಯಿಂದ ಕಂಡಿರಬಹುದು ಎನಿಸುತ್ತದೆ. ಕರ್ನಾಟಕದಲ್ಲಿ ಲಿಂಗಾಯತ ಧರ್ಮೀಯರಲ್ಲಿ ಮಾತ್ರವಲ್ಲ, ಉಳಿದೆಲ್ಲ ಬಹುಪಾಲು ಜನರಲ್ಲಿ ಬಸವಣ್ಣ, ಬಸವರಾಜ ಎಂಬ ಹೆಸರುಗಳು ವ್ಯಾಪಕವಾಗಿ ರೂಢಿಯಲ್ಲಿರುವುದನ್ನು ಕಾಣುತ್ತೇವೆ. ಇದರಿಂದ ಬಸವ (ಲಿಂಗಾಯತ) ಧರ್ಮಾನುಯಾಯಿಗಳು ಎಷ್ಟು ಸಂಖ್ಯೆಯಲ್ಲಿರುವರೋ ಅದಕ್ಕೂ ಮಿಗಿಲಾಗಿ ಬಸವ ತತ್ತ್ವಾಭಿಮಾನಿಗಳು, ಬಸವ ತತ್ತ್ವಾನುಯಾಯಿಗಳು ಇದ್ದಾರೆ. ಇವರೆಲ್ಲರನ್ನೂ ಒಳಗೊಂಡಿರುವುದೇ ಶರಣ ಸಮಾಜ. ಹೀಗೆ ಲಿಂಗಧಾರಿಗಳ ಲಿಂಗವಂತ ಸಮಾಜ, ಬಸವ ತತ್ತ್ವಾಭಿಮಾನಿಗಳಾದ ಲಿಂಗಾಯತೇತರ (ಶರಣ) ಸಮಾಜ ಒಟ್ಟಾಗಿ ಭಾಗವಹಿಸುವುದೇ "ಶರಣ ಮೇಳ".

ಚದುರಿದ ಜನ

ಭಾರತ ದೇಶದ ಇತಿಹಾಸದಲ್ಲಿಯೇ ಪ್ರಪ್ರಥಮವಾದ ವರ್ಣಾಂತರ ವಿವಾಹವನ್ನು ದಿಟ್ಟತನದಿಂದ ಪೂರೈಸಿದ ಶರಣರು ಹಲವಾರು ಸಂಕಷ್ಟಗಳಿಗೆ ಒಳಗಾದರು. ಆಗ ಅವರು ಚದುರಿ ಚೆಲ್ಲಾಪಿಲ್ಲಿಯಾದರು. ಕರ್ನಾಟಕದ ಮೂಲೆಮೂಲೆಗಳಿಗೆ ಹಂಚಿ ಹೋದರು. ಉಳವಿಯ ದುರ್ಗಮ ಅರಣ್ಯ ಪ್ರವೇಶಿಸಿದರು. ಮಲೆನಾಡುಗಳಲ್ಲಿ ಬೀಡುಬಿಟ್ಟರು. ತಮಿಳುನಾಡಿನ ಗುಡ್ಡಗಾಡುಗಳನ್ನು ಪ್ರವೇಶಿಸಿದರು. ಡಂಕಣಿ ಕೋಟೆಯ ನೂರೊಂದಪ್ಪನ ಗದ್ದುಗೆ, ಕಲ್ಯಾಣ ಹೊಸಪೇಟೆ (ಪುದುಪೇಟ್ಟೈ) ದಾಖಲೆಯಾಗಿ ನಿಂತಿವೆ.. ಸಂಪರ್ಕ ಮಾಧ್ಯಮದ ಕೊರತೆಯಿಂದಾಗಿ ಚದುರಿ ಹೋದ ಜನ ಬಸವ ಭಕ್ತಿಯನ್ನೇ ಉಸಿರಾಗಿ ಮಾಡಿಕೊಂಡು ಕಾಲ ಕಳೆದುಕೊಂಡು ಬಂದಿದ್ದಾರೆ. ಇದೀಗ ಕರ್ನಾಟಕ, ತಮಿಳುನಾಡು, ಆಂಧ್ರ, ಮಹಾರಾಷ್ಟ್ರ ಮುಂತಾದ ಕಡೆಯಲ್ಲಿರುವವರನ್ನೆಲ್ಲ ಒಂದು ಕಡೆ ಸೇರಿಸಲು ಶರಣ ಮೇಳದಿಂದ ಸಾಧ್ಯವಾಗುತ್ತಿದೆ.

ಲಿಂಗಾಯತ ಸಮಾಜ ಈ ಸದ್ಯ ಕಣ್ಣು-ಕಾಲೂ ಎರಡೂ ಇಲ್ಲದಂತಿದೆ. ಧಾರ್ಮಿಕ ಸಮಾಜಕ್ಕೆ ಕಣ್ಣು ಅದರ ಸಂವಿಧಾನಾತ್ಮಕ ಸಾಹಿತ್ಯ, ಕಾಲು ಅದರ ಸಂಘಟನಾ ಶಕ್ತಿ.

"ಹಾಲ ತೊರೆಗೆ ಬೆಲ್ಲದ ಕೆಸರು ಸಕ್ಕರೆಯ ಮಳಲು
ನವತವರಾಜದ ನೊರೆತೆರೆಯಂತೆ
ಆದ್ಯರ ವಚನವಿರಲು, ಬೇರೆ ಭಾವಿಯ ತೋಡಿ ಉಪ್ಪನೀರ
ನುಂಬುವಂತೆ"

ಈ ಧರ್ಮಾನುಯಾಯಿಗಳು ವಚನ ಸಾಹಿತ್ಯದ ಅಧ್ಯಯನ, ಪಾರಾಯಣ, ಪಠಣ, ಅನುಷ್ಠಾನ ಬಿಟ್ಟು ಏನೇನೋ ಓದುತ್ತಾರೆ. ಈ ಉಪ್ಪನೀರು ಕುಡಿಸುವುದರಲ್ಲೇ ಅನೇಕ ಮಠಾಧೀಶರೂ ಆಸಕ್ತರಾಗಿದ್ದಾರೆ ಎಂಬುದು ಗಮನಾರ್ಹ. ವಚನ ಸಾಹಿತ್ಯದ ಮರ್ಮ, ಅಗತ್ಯ, ಆಳಗಳನ್ನು ಮನಗಾಣಿಸಿಕೊಟ್ಟು ಸಮಾಜಕ್ಕೆ ಕಣ್ಣು ಕೊಟ್ಟು, ತತ್ತ್ವದ ತಳಹದಿಯ ಮೇಲೆ ಸಂಘಟನೆ ಮಾಡುವುದೇ ಶರಣ ಮೇಳದ ಗುರಿ.

ಗುರು ಋಣ ತೀರಿಸುವುದು

ಅಪ್ಪ ಬಸವಣ್ಣನವರು ಮತ್ತು ಅವರ ಸಮಕಾಲೀನ ಶರಣರು ಮಾಡಿದ ಮಹಾನ್‌ತ್ಯಾಗ ಉಪಮಾತೀತವಾದುದು. ಅದನ್ನು ವರ್ಣಿಸಲಿಕ್ಕೆ ಯಾವ ಲೇಖನಿಗೂ ಸಾಧ್ಯವಿಲ್ಲ. ಬಸವಣ್ಣನವರನ್ನು ನಖಶಿಖಾಂತವಾಗಿ ದ್ವೇಷಿಸುವ ಲಿಂಗಾಯತ ಮತ್ತು ಲಿಂಗಾಯತೇತರ ಮತಾಂಧರು, ಜಾತಿವಾದಿಗಳೂ ಸಹ ಅವರ ಪ್ರತಿಭೆ, ವಿದ್ವತ್, ಕಳಕಳಿಯ ಮುಂದೆ ಸೋತು, ಉಸಿರೆತ್ತದವರಾಗುತ್ತಾರೆ. ಅಂಥಾ ಪ್ರತಿಭಾವಂತ ಚೇತನ ಚಾಣಕ್ಯನಂತೆ ಅರ್ಥಶಾಸ್ತ್ರ ಗ್ರಂಥವನ್ನೋ, ಶಂಕರಾಚಾರ್ಯರಂತೆ ಭಾಷ್ಯವನ್ನೋ ಬರೆದು ತಾನು ಹುಟ್ಟಿದ ಸಮಾಜದಲ್ಲಿ ಪೂಜಾರ್ಹನಾಗಬಹುದಿತ್ತು. ಆದರೆ ನೊಂದವರನ್ನು ಸಂತೈಸಲು, ತುಳಿಯಲ್ಪಟ್ಟವರ ಧ್ವನಿಯಾಗಲು ಆ ತಂದೆ ಜಾತಿಯ ಕಟ್ಟೆಯನ್ನು ಇಳಿದು ಜನತೆಯ ಎಡೆಗೆ ಬಂದರಲ್ಲ! ನಮಗಾಗಿ, ನಂತರದ ಜಗತ್ತಿಗಾಗಿ ಎಂಥಾ ತ್ಯಾಗಕ್ಕೆ ಅಣಿಯಾದರಲ್ಲ, ಇದನ್ನೇಕೆ ಈ ಅನುಯಾಯಿಗಳು ಅರ್ಥಮಾಡಿಕೊಳ್ಳುತ್ತಿಲ್ಲ! 12ನೆಯ ಶತಮಾನದ ಅಂದಿನ ಜನ ಅರ್ಥಮಾಡಿಕೊಂಡಷ್ಟೂ, ಗುರು ಬಸವಣ್ಣನವರ ಕಾರ್ಯಕ್ಕೆ ಹೆಗಲು ಕೊಟ್ಟಷ್ಟೂ ಇಂದಿನ ಅನುಯಾಯಿಗಳು ಏಕೆ ಅರ್ಥಮಾಡಿಕೊಳ್ಳುತ್ತಿಲ್ಲ? ಮಠಾಧಿಕಾರಿಗಳು ಏಕೆ ಅರ್ಥಮಾಡಿಕೊಳ್ಳಲು ಬಿಡುತ್ತಿಲ್ಲ? ! ಏನೇ ಆಗಲಿ ನಮ್ಮೆಲ್ಲರ ಮೇಲೆ ದೊಡ್ಡ ಋಣ ಇದೆ. ಬಸವಣ್ಣನವರು– ಅವರ ಸಮಕಾಲೀನರು ಯಾವುದಕ್ಕಾಗಿ ಬದುಕಿದರು, ಹೋರಾಡಿದರು, ಯಾವ ತತ್ತ್ವಕ್ಕಾಗಿ ತಮ್ಮನ್ನು ತಾವು ಸಮರ್ಪಿಸಿಕೊಂಡರು ಎಂಬುದನ್ನು ಜಗತ್ತಿಗೆ ಮನವರಿಕೆ ಮಾಡಿಕೊಡದ ಹೊರತು ನಮ್ಮ ಋಣ ತೀರದು.

ಆದ್ದರಿಂದ, ಲಿಂಗವಂತ ಧರ್ಮೀಯರು ತಮ್ಮ ಹೊಣೆಗಾರಿಕೆಯನ್ನು ಅರ್ಥಮಾಡಿಕೊಳ್ಳಬೇಕು. ಎಂದೋ ಒಮ್ಮೆ ನಡೆಸಿ, ಕೈಬಿಡುವ ಉತ್ಸವಗಳಿಗೆ ವಿಪರೀತ ಹಣ ವ್ಯಯಿಸದೆ ಒಂದು ಧ್ಯೇಯ–ಗೊತ್ತು-ಗುರಿಯೊಡನೆ ವಿಧಾಯಕ ಕಾರ್ಯಕ್ರಮ

ಗಳೊಡನೆ ವ್ಯವಸ್ಥಿತವಾಗಿ ಪ್ರತಿ ವರ್ಷ ನಡೆಯುವ ಶರಣಮೇಳಕ್ಕೆ ಧನ-ಧಾನ್ಯ-ಸಾಮಗ್ರಿಗಳನ್ನು ನೀಡುವುದು, ತಾವು ಬಂದು ಭಾಗಿಗಳಾಗುವುದು ಕರ್ತವ್ಯ ಎಂಬುದನ್ನು ಮನಗಾಣಬೇಕು.

"ನಮ್ಮೂರಲ್ಲಿ ಘಂಟೆ ಬಸವಣ್ಣನ ಗುಡಿ ಕಟ್ಟಬೇಕು, ನಮ್ಮೂರ ದೇವತೆ ಜಾತ್ರೆ ಮಾಡಬೇಕು." ಎಂದು ಇಂಥದರಲ್ಲೇ ಕಾಲಕಳೆಯದೆ ಸಮಷ್ಟಿ ಚಿಂತನೆ ಮಾಡುವುದು ಕಲಿಯಬೇಕು. ಒಬ್ಬ ಮುಖ್ಯ ಇಂಜಿನಿಯರ್ ಬೃಹತ್ತಾದ ಒಂದು ಅಣೆಕಟ್ಟಿನ ಯೋಜನೆ ಹಾಕಿದಾಗ ಅದು ಪೂರ್ಣಗೊಂಡಾಗ ಹೇಗೆ ಕಾಣುತ್ತದೆ, ಅದರಿಂದ ಏನು ಪ್ರಯೋಜನವಾಗುತ್ತದೆ ಎಂಬ ಕಲ್ಪನೆ ಹೊಂದಿರುವನು. ಆದೇ ಅಲ್ಲಿ ಕೆಲಸ ಮಾಡುವ ಕೂಲಿಕಾರನಿಗಾಗಲಿ, ಮೇಲುಸ್ತುವಾರಿ ಮಾಡುವ ಇಂಜಿನಿಯರನಿಗಾಗಲೀ ಅದು ತಿಳಿದಿರುವುದಿಲ್ಲ. ಹಾಗೆಯೇ ಶರಣ ಮೇಳವು ಮುಂಬರುವ ವರ್ಷಗಳಲ್ಲಿ ಏನನ್ನು ಸಾಧಿಸಬಹುದೆಂಬ ಬಗ್ಗೆ ಕೆಲವರಿಗೇ ಕಲ್ಪನೆಯಿದೆ, ಅಂದು ಗುರು ಬಸವಣ್ಣನವರು ಬೃಹತ್ ಯೋಜನೆ ಹಾಕಿ ವಚನ ಸಾಹಿತ್ಯದ ಅಣೆಕಟ್ಟು ಕಟ್ಟಲು ಆರಂಭಿಸಿದರು. ಅಣೆಕಟ್ಟು ಪೂರ್ಣವಾಯಿತು ; ನೀರನ್ನು ತುಂಬುವ ಮುನ್ನವೇ ಕಲ್ಯಾಣ ಕ್ರಾಂತಿಯಾಯಿತು. ಆ ಕೆಲಸವನ್ನು ನಾವು-ನೀವಿಂದು ಪೂರೈಸಿ, ಶರಣ ಸಮಾಜ ಎಂಬ ಜಲಾಶಯ ಭರ್ತಿ ಮಾಡಬೇಕಾಗಿದೆ. ಶರಣ ಮೇಳದಿಂದ ವರ್ಷದಿಂದ ವರ್ಷಕ್ಕೆ ಸಂಘಟನೆಯಾಗುತ್ತದೆ. ಗುರು ಬಸವಣ್ಣನವರು ಜೀವಂತಗೊಳ್ಳುತ್ತಾರೆ, ಶರಣ ತತ್ತ್ವ ಜೀವಂತಗೊಳ್ಳುತ್ತದೆ. ವಿಚಾರ ಶೀಲತೆಯ ಬೆಳಕು ಚೆಲ್ಲವರಿಯುತ್ತದೆ ಎಂಬುದನ್ನು ಮನಗಾಣಬೇಕು, ಸಹಕರಿಸಬೇಕು.

—ಮಾತಾಜಿ ★

ಕಲ್ಯಾಣ ಕಿರಣ ಓದುಗರೇ ಗಮನಿಸಿರಿ

ಕಲ್ಯಾಣ ಕಿರಣ ಪತ್ರಿಕೆಯು ಅಂಚೆಯಲ್ಲಿ ಬರುತ್ತಿದ್ದಂತೆಯೇ ನಿಮ್ಮ ಚಂದಾ ಸಂಖ್ಯೆ, ಆಜೀವ ಸದಸ್ಯತ್ವ ಸಂಖ್ಯೆ ಗುರುತು ಮಾಡಿ ಒಂದು ಕಡೆ ಬರೆದು ಇಟ್ಟುಕೊಳ್ಳಿರಿ. ಸಕಾಲದಲ್ಲಿ ಪತ್ರಿಕೆ ಕೈ ಸೇರದೆ ಇದ್ದಾಗ, ವಿಳಾಸ ತಿದ್ದುಪಡಿ, ಬದಲಾವಣೆ ಮಾಡುವಾಗ ನಿಮ್ಮ ಚಂದಾ ಸಂಖ್ಯೆಯನ್ನು ಬರೆಯಿರಿ. ದಿನ ದಿನಕ್ಕೆ ವೃದ್ಧಿಯಾಗುತ್ತಿರುವ ಚಂದಾದಾರ ಪಟ್ಟಿಯಲ್ಲಿ ಕ್ರಮಸಂಖ್ಯೆಯಿಲ್ಲದೆ ಹುಡುಕುವುದು ಕಷ್ಟಸಾಧ್ಯವಾಗುತ್ತದೆ ಮತ್ತು ಕಾರ್ಯಕರ್ತರ ಸಮಯ ವ್ಯರ್ಥವಾಗುತ್ತದೆ ಎಂಬುದನ್ನು ಮನಗಾಣಿರಿ. ಪತ್ರವ್ಯವಹಾರ ಮಾಡುವಾಗ ಚಂದಾ ಸಂಖ್ಯೆಯೊಡನೆ ಪೂರ್ಣ ವಿಳಾಸವನ್ನೂ ಬರೆಯುವ ಅಭ್ಯಾಸ ಇಟ್ಟುಕೊಳ್ಳಿರಿ.

ಅನುಭವ ಮಂಟಪ-770 ಶರಣರಿಂದ ಸಾಮೂಹಿಕ ಇಷ್ಟಲಿಂಗಪೂಜೆ

ಶರಣ ಬಂಧುಗಳೇ,

ವಿಶ್ವಗುರು ಬಸವಣ್ಣನವರು 12ನೇ ಶತಮಾನದಲ್ಲಿ ಲಕ್ಷದ ಮೇಲೆ ತೊಂಬತ್ತಾರು ಸಾವಿರ ಧರ್ಮಾನುಯಾಯಿಗಳನ್ನು ಹೊಂದಿದ್ದರು ಮತ್ತು 770 ಜನ ಶರಣರನ್ನು ರೂಪಿಸಿದರು, ಒಂದು ಕಡೆ ಸಂಘಟಿಸಿದರು. ಇಂಥದೊಂದು ದೃಶ್ಯವು ಕಲ್ಪಿಸಿಕೊಳ್ಳಲಿಕ್ಕೇ ರೋಮಾಂಚಕಾರಿ, ಪೂಜ್ಯ ಗುರು ಬಸವಣ್ಣನವರು ತಮ್ಮನಂತರದ ಅನುಯಾಯಿಗಳು, ತಾವು ಮಾದರಿಯಾಗಿ ಮಾಡಿ ತೋರಿಸಿದ್ದನ್ನು, ಮಾಡಬೇಕೆಂದು ಆಶಿಸಿದ್ದರು. ಅನುಭವಗೋಷ್ಠಿ, ಗಣಪರ್ವ ಮುಂತಾದುವು ಅವರು ಇಷ್ಟಪಟ್ಟ ಕಾರ್ಯಕ್ರಮಗಳು. ಆ ಗುರುವಿನ ಇಚ್ಛೆಯಂತೆ ನಾವೂ ಕೈಲಾದಷ್ಟನ್ನು ಮಾಡೋಣ.

1991ನೆಯ ಜನವರಿ 13, 14 ಮತ್ತು 15 ರಂದು ನಡೆಯುವ 4ನೆಯ ಶರಣ ಮೇಳದ ಸಂದರ್ಭವನ್ನು ಉಪಯೋಗಿಸಿಕೊಂಡು ದಿ. 12-1-1991ರಂದು ಒಂದು ವಿಶೇಷ ಕಾರ್ಯಕ್ರಮವನ್ನು ಸಂಯೋಜಿಸುವ ಆಲೋಚನೆಯಿಂದ ಈ ಪ್ರಕಟಣೆ ಹೊರಡಿಸಲಾಗಿದೆ.

1. ಮಹಾಮನೆಯ ಆವರಣದಲ್ಲಿ ಒಂದು ಭವ್ಯ ಮತ್ತು ಸುಂದರವಾದ ಅನುಭವ ಮಂಟಪದ ಸೆಟ್ಟು (ಪ್ರತ್ಯೇಕ ಪೆಂಡಾಲ್) ಹಾಕಲಾಗುವುದು. ವೇದಿಕೆಯ ಮೇಲೆ ಆದಿ ಶರಣರಲ್ಲಿ 6 ಜನ ಪ್ರಮಥರನ್ನು ಮೂರ್ತಗೊಳಿಸಿ ಅವರ ಸನ್ನಿಧಿಯಲ್ಲಿ 770 ಜನರು ಕುಳಿತು ಇಷ್ಟಲಿಂಗ ಪೂಜೆ ಮಾಡಲಾಗುವುದು.
2. ವಿವರವಾದ ವ್ಯಾಖ್ಯಾನವನ್ನು ಒಳಗೊಂಡ ಪೂಜೆಯ ವೀಡಿಯೋ ಚಿತ್ರೀಕರಣ ಇಷ್ಟಲಿಂಗ ಪೂಜೆಯ ಪ್ರಾತ್ಯಕ್ಷಿಕೆಯನ್ನು ಒಳಗೊಂಡ ಈ ಕೆಸೆಟ್ಟನ್ನು ವಿವಿಧ ಹೊರ ರಾಜ್ಯಗಳಿಗೆ, ರಾಷ್ಟ್ರಗಳಿಗೂ ಕಳಿಸಿಕೊಡಲು ಅನುಕೂಲವಾಗುವುದು.

ಬಸವ ಧರ್ಮ ಪೀಠದ ವತಿಯಿಂದ ದಿ. 12-1-1991ರಂದು ಮಧ್ಯಾಹ್ನ 3 ರಿಂದ 6 ರವರೆಗೆ ನಡೆಯುವ ಈ ಚಿತ್ರೀಕರಣದ ಸಲುವಾಗಿ ವಿಶೇಷ ವ್ಯವಸ್ಥೆ ಮಾಡಲಾಗುವುದು. ಪೂಜೆಯ ಪೆಂಡಾಲ್, 12-1-1991 ರಂದು ಮಾಡಲಾಗುವ ಊಟದ ವೆಚ್ಚವನ್ನು ಬಸವ ಧರ್ಮ ಪೀಠವು ಭರಿಸುವುದು.

ಪ್ರತಿವರ್ಷವೂ ಬಸವ ಕ್ರಾಂತಿ ದಿನ(ಸಂಕ್ರಾಂತಿ)ದ ಮರುದಿವಸ ನಡೆಯುವ ಸಾಮೂಹಿಕ ಇಷ್ಟಲಿಂಗ ಪೂಜೆಯು ಈ ವರ್ಷವೂ ಇರುವುದು. ವೀಡಿಯೋ ಚಿತ್ರೀಕರಣಕ್ಕಾಗಿ

ನಡೆಯುವ ಪೂಜೆ ಮಾತ್ರ 12-1-1991ರಂದು ವಿಶೇಷ ವ್ಯವಸ್ಥೆಯೊಡನೆ ಜರುಗಲಿದೆ. 770 ಜನರು ಭಾಗವಹಿಸಿ ವಿಶೇಷ ಪೂಜೆಯಲ್ಲಿ ಪಾಲ್ಗೊಳ್ಳಬೇಕು ಎನ್ನುವವರು ಪ್ರವೇಶ ಶುಲ್ಕ ತಲಾ 30 ರೂ. ಗಳನ್ನು ಆದಷ್ಟು ಬೇಗ ತುಂಬಿ ತಮ್ಮ ಸ್ಥಳವನ್ನು ಕಾಯ್ದಿರಿಸಿಕೊಳ್ಳಬೇಕಾಗುವುದು. (3 ದಿವಸಗಳ ಶರಣ ಮೇಳದ ಶುಲ್ಕಕ್ಕೆ ಇದು ಸಂಬಂಧಿಸಿಲ್ಲ.) ಈ ಶರಣ-ಶರಣೆಯರು ಬಿಳಿಯ ಸಮವಸ್ತ್ರ ಉಟ್ಟು ಕಾವಿಯ ಬಣ್ಣದ ಮೇಲು ಹೊದ್ದಿಕೆ(ಸ್ಕಾರ್ಫ್) ಹೊದ್ದಿರಬೇಕು. ಕಾವಿಯ ಬಣ್ಣದ ಷಟ್ಕೋನ ಮುದ್ರಣಗೊಂಡ ಸ್ಕಾರ್ಫ್ ನಮ್ಮಲ್ಲೇ ದೊರೆಯುತ್ತವೆ. ಶರಣೆಯರ ಬಿಳಿಯ ಸೀರೆ ಹೆಚ್ಚಾಗಿ ಪ್ಲೇನಾಗಿ ಇದ್ದು, ಚಿಕ್ಕ ಅಂಚು ಇರಬಹುದು, ದೊಡ್ಡ ಹೂವು ದಟ್ಟವಾದ ಅಂಚು ಇರಬಾರದು. ಶರಣರು ಬಿಳಿಯ ಧೋತ್ರ, ಲುಂಗಿ ಉಟ್ಟು, ಮೇಲೆ ಬರಿಯ ಶಲ್ಯೆಯನ್ನು ಹೊದ್ದಿರಬಹುದು. ಅಥವಾ ಬಿಳಿಯ ಬನಿಯನ್ ಹಾಕಿ ಮೇಲೆ ಕಾವಿಯ ಸ್ಕಾರ್ಫ್ ಹಾಕಬಹುದು.

ವಿ. ಸೂ. ಯಾರೂ ಚೂಡೀದಾರ, ಫ್ರಾಕ್ ಮುಂತಾದ ವೇಷಗಳನ್ನು ಧರಿಸಿಕೊಂಡು ಪೂಜೆಗೆ ಕುಳಿತುಕೊಳ್ಳಬಾರದು.

ತಮ್ಮ ಪೂಜಾ ಸಾಮಗ್ರಿಗಳಾದ ತಟ್ಟೆ, ಲೋಟಾ, ವಿಭೂತಿ, ಊದಿನಕಡ್ಡಿ, ಕಲ್ಲುಸಕ್ಕರೆ, ಗಂಟೆ ತಾವೇ ತರಬೇಕು. ಪೂಜಾ ಸಮಿತಿಯಿಂದ ಪತ್ರೆ-ಪುಷ್ಪ, ನೀರು ಗಂಧ ಒದಗಿಸಲಾಗುವುದು. ಒಂದು ಸುಂದರವಾದ ಮೆಟಲ್ ಬ್ಯಾಡ್ಜನ್ನು ಪೂಜೆಯ ಜನರಿಗಾಗಿ ವಿಶೇಷವಾಗಿ ಕೊಡಲಾಗುವುದು.

ಅತ್ಯಂತ ಶಿಸ್ತಿನಿಂದ ಸಾಲು ಸಾಲಾಗಿ ಪೂಜೆ ಮಾಡುವರನ್ನು ಕೂರಿಸಲಾಗುವುದು. 770 ಜನರನ್ನು ಪೂಜೆಗೆ ಕೂಡ್ರಿಸುವ ಯೋಜನೆ ಪ್ರಕಾರ ಸ್ಥಳಾವಕಾಶ ಮಾಡಲಿರುವುದರಿಂದ ಶುಲ್ಕದ ಮೊತ್ತ ಬಂದಂತೆ ಇಲ್ಲಿ ದಾಖಲೆ ಮಾಡಿಕೊಂಡು ಸಂಖ್ಯೆಯನ್ನು. ದಾಟಿದ ಮೇಲೆ ಪ್ರವೇಶವನ್ನು ಕೊಡಲಾಗುವುದಿಲ್ಲ.

ಆದ್ದರಿಂದ ಈ ಪ್ರಕಟಣೆ ನೋಡಿದ ಆಸಕ್ತರು ಆದಷ್ಟು ಬೇಗನೆ ತಾವು ಇಷ್ಟಲಿಂಗ ಪೂಜೆ ಮತ್ತು ಅನುಭವ ಮಂಟಪ ಚಿತ್ರೀಕರಣದಲ್ಲಿ ಭಾಗವಹಿಸುವ ಬಗ್ಗೆ ಖಚಿತಪಡಿಸಬೇಕಲ್ಲದೆ ಅವರ ಪರವಾಗಿ ಎಷ್ಟು ಜನರು ಭಾಗವಹಿಸುವರು ಎಂಬ ಬಗ್ಗೆ ವಿವರ ತಿಳಿಸಿ, ಪ್ರವೇಶ ಶುಲ್ಕವನ್ನು ಆದಷ್ಟು ಬೇಗನೆ 'ಬಸವ ಧರ್ಮ ಪೀಠ' ಖಾತೆಗೆ ಎಂ.ಓ. ಡಿ.ಡಿ. ಮೂಲಕ ಕಳಿಸಿಕೊಡಬೇಕು. ಪ್ರವೇಶಕ್ಕೆ ಕಡೆಯ ದಿನಾಂಕ 5–1–1991 ಒಂದು ವಿಶೇಷ ಯೋಜನೆಯಡಿಯಲ್ಲಿ ರೂಪಿಸಿರುವ ಈ ಕಾರ್ಯಕ್ರಮದ ಚಿತ್ರೀಕರಣವಿರುವುದರಿಂದಲೂ, ಸಂಖ್ಯೆಯನ್ನು ನಿಗದಿ ಪಡಿಸಿರುವುದರಿಂದಲೂ, ವ್ಯವಸ್ಥಿತವಾದ ಸಿದ್ಧತೆಯನ್ನು ಮಾಡಿಕೊಳ್ಳಬೇಕಾಗಿರುವುದರಿಂದಲೂ ಶರಣ ಬಂಧುಗಳಿಂದ ಬೇನೆಗ ಉತ್ತರ ಬಂದಷ್ಟೂ ಅವರಿಗೆ ಆದ್ಯತೆ ದೊರೆಯುತ್ತದೆ. ಮತ್ತು ನಮಗೂ ಸಿದ್ಧತೆ ಮಾಡಿಕೊಳ್ಳಲು ಅನುಕೂಲವಾಗುತ್ತದೆ.

20 ನೇ ಶತಮಾನದ ಮಾದರಿ ಅನುಭವ ಮಂಟಪವನ್ನು ನೋಡುವ, ಅದರಲ್ಲಿ ಭಾಗವಹಿಸುವ ಸದವಕಾಶವನ್ನು ಪಡೆದುಕೊಳ್ಳಿರಿ.

—ಪೂಜ್ಯ ಶ್ರೀ ಜಗದ್ಗುರು ಮಾತೆ ಮಹಾದೇವಿ
ಸಂಯೋಜಕರು, 770 ಶರಣರಿಂದ ಸಾಮೂಹಿಕ ಇಷ್ಟಲಿಂಗಾರ್ಚನೆ

ವಿಳಾಸ :–

ಬಸವ ಧರ್ಮ ಪೀಠ
ಮಹಾಮನೆ ಮಹಾಮಠ,
ಕೂಡಲ ಸಂಗಮ–587115
ತಾ- ಹುನಗುಂದ, ಜಿ- ಬಿಜಾಪುರ

ಬಸವ ಧರ್ಮ ಪೀಠ
ಬಸವ ಮಂಟಪ, 2035
2ನೇ ಬ್ಲಾಕು. 20ನೇ ಮುಖ್ಯರಸ್ತೆ,
ರಾಜಾಜಿನಗರ, ಬೆಂಗಳೂರು–560010

ವಿಶೇಷ ವಿವರಗಳು :

1. ವೀಡಿಯೋ ಚಿತ್ರೀಕರಣ ಮಾಡಿ ಇಷ್ಟಲಿಂಗ ಪೂಜಾ ಕೆಸೆಟ್ಟನ್ನು ಅನೇಕ ಕಡೆ ಕಳಿಸಬೇಕಾಗಿರುವ ಕಾರಣ 1991 ರ ಶರಣ ಮೇಳದ ಹೊತ್ತಿಗೆ ಈ ಕಾರ್ಯಕ್ರಮ ಹಮ್ಮಿಕೊಳ್ಳಲಾಗಿದೆಯೇ ವಿನಾ ಪ್ರತಿವರ್ಷವೂ ಇದು ಇರುವುದಿಲ್ಲ.
2. ಪೂಜೆಯಲ್ಲಿ ಭಾಗವಹಿಸಬೇಕು ಎನ್ನುವವರು 12-1-1991 ರಂದು ಬೆಳಿಗ್ಗೆ 12 ಗಂಟೆಯ ಒಳಗೆ ಕೂಡಲ ಸಂಗಮವನ್ನು ತಲ್ಪಬೇಕು.
3. ಬಿಳಿಯ ನೂಲಿನ ಸೀರೆ ಬೇಕು ಎನ್ನುವವರು ಅದಕ್ಕಾಗಿ ಪ್ರತ್ಯೇಕವಾಗಿ 70ರೂ, ಕಳಿಸಿದರೆ, ಮೊದಲೇ ಸೀರೆಗಳನ್ನು ತರಿಸಿ ಅಲ್ಲಿಗೆ ಬಂದಾಗ ಕೊಡಲಾಗುವುದು.
4. ಕೆಲವು ಗಣ್ಯರಿಗೆ ವಿಶೇಷ ಆಹ್ವಾನವನ್ನು ನೀಡಲಾಗುವುದು.
5. ಶರಣ ಮೇಳ ಉತ್ಸವ ಸಮಿತಿಯ ಸದಸ್ಯರು ದಿ. 14–10–90 ರಂದು ಈ ವಿಶೇಷ ಪೂಜಾ ಕಾರ್ಯಕ್ರಮಕ್ಕೆ ಬಹುಮತದ ಒಪ್ಪಿಗೆ ನೀಡಿದರಾದೂ ನಂತರ ಕೆಲವರು ಆಕ್ಷೇಪವೆತ್ತಿದ್ದರಿಂದ ಈ ಕಾರ್ಯಕ್ರಮವನ್ನು ಬಸವ ಧರ್ಮ ಪೀಠದ ವತಿಯಿಂದ ವ್ಯವಸ್ಥೆ ಮಾಡಲಾಗಿದೆ, ಮತ್ತು ಶರಣ ಮೇಳಕ್ಕೆ ಒಂದು ದಿವಸ ಮೊದಲೇ ಇಡಲಾಗಿದೆ. 16 ಎಂ. ಎಂ. ಫಿಲ್ಮ್‌ದಲ್ಲೇ ಚಿತ್ರಿಕರಿಸಬೇಕಾದ ಯೋಜನೆಯು ಇದಾಗಿದ್ದರೂ, ಖರ್ಚಿನ ಭಯದಿಂದಾಗಿ ವೀಡಿಯೋ ಚಿತ್ರೀಕರಣಕ್ಕೆ ಸಮಾಧಾನ ಪಟ್ಟುಕೊಳ್ಳಬೇಕಾಗಿದೆ.

ಒಂದು ವಿಶೇಷ ಬಿನ್ನಹ

ಪೂಜೆಯ ಪ್ರವೇಶ ಶುಲ್ಕ, ದಿ. 12–1–1991ರ ವೀಡಿಯೋ ಚಿತ್ರೀಕರಣಕ್ಕೆ ಸಂಬಂಧಿಸಿದಂತೆ 30 ರೂ ಇದೆ. ಇದು ಕೇವಲ ಪೂಜೆಗೆ ಸಂಬಂಧಿಸಿದ್ದು, 3 ದಿವಸಗಳ ಅಂದರೆ 13, 14, 15ರ ಊಟ–ವಸತಿಗಳಿಗೆ ಸಂಬಂಧ ಪಟ್ಟಿದ್ದಲ್ಲ. ಅದು ಪ್ರತ್ಯೇಕವಿದೆ. 30 ರೂ ಪ್ರವೇಶ ಶುಲ್ಕದಲ್ಲಿ ಪೂಜೆಯ ಏರ್ಪಾಟು ಅಂದಿನ ಪೆಂಡಾಲ್ (ಮಂಟಪ) ಬಾಡಿಗೆ, ಬರುವ ಜನರಿಗೆ 12–1–91ರ ವಸತಿ–ಊಟ ಎಲ್ಲ ನಿರ್ವಹಿಸಲಾಗುವುದು.

ಕೆಲವರು ಕೇವಲ 30ರೂ ಕೊಟ್ಟು ನಾಲ್ಕು ದಿವಸಗಳ ಅನುಕೂಲತೆ ಪಡೆಯಬಹುದೆಂಬ ತಿಳುವಳಿಕೆ ಹೊಂದಿದಂತೆ ತೋರುತ್ತದೆ. ಉತ್ಸವ ಸಮಿತಿ ಸದಸ್ಯರ ಸಭೆಯಲ್ಲಿ "ಎಲ್ಲ ಬೆಲೆಗಳು ಏರಿರುವ ಸನ್ನಿವೇಶದಲ್ಲಿ 50 ರೂ, ಪ್ರತಿನಿಧಿ ಶುಲ್ಕದಲ್ಲಿ ಊಟ–ವಸತಿಗಳ ವೆಚ್ಚ ಭರಿಸುವುದು ಸಾಧ್ಯವಿಲ್ಲ. ಶುಲ್ಕವನ್ನು ಏರಿಸಬೇಕು" ಎಂದು ಅಭಿಪ್ರಾಯಪಟ್ಟರು. ಆದರೆ ನಾನೇ "ಜನರಿಗೆ ಇನ್ನಷ್ಟು ಶ್ರಮಕೊಡುವುದು ಬೇಡ; ಜನ ಸಾಮಾನ್ಯರಿಗೆ ಅಷ್ಟೇ ಇರಲಿ. ದಾನಿಗಳಿಂದ ಹೆಚ್ಚಿನ ನೆರವು ಪಡೆದು, ಆ ನಷ್ಟವನ್ನು ತುಂಬಿಕೊಳ್ಳೋಣ" ಎಂದು ಸೂಚಿಸಿದೆ.

ಆದ್ದರಿಂದ ದಾಸೋಹಿಗಳು ಉದಾರವಾಗಿ ನೀಡಬೇಕು. ನಮಗೆ ಪ್ರತಿನಿಧಿಗಳು ಕೊಡುವ 50 ರೂ. ಶುಲ್ಕಕ್ಕಿಂತ ಊಟ ವಸತಿಗೆ ಹೆಚ್ಚಿನ ಖರ್ಚಾಗುತ್ತದೆ. ಮತ್ತು ಉಚಿತವಾಗಿ ದಾಸೋಹದಲ್ಲಿ ಪ್ರಸಾದ ಪಡೆಯುವ ಭಜನಾಮಂಡಲಿಯವರು, ಪಾದಯಾತ್ರಿಗಳು ಮತ್ತು ಗ್ರಾಮಾಂತರ ಪ್ರದೇಶದ ಸದ್ಭಕ್ತರ ಜವಾಬ್ದಾರಿ ಜಾಸ್ತಿ ಇರುತ್ತದೆ. ಆದ್ದರಿಂದ ಹಣವನ್ನು ಸಂಗ್ರಹಿಸುವ ಕಾಯಕರ್ತರು ಈ ಬಗ್ಗೆ ಧನದಾತರಿಗೆ ಮನವೊಲಿಸಿ ಧನ–ಧಾನ್ಯ, ಪಡಿ-ಪದಾರ್ಥ ಸಂಗ್ರಹ ಮಾಡಬೇಕೆಂದು ಸೂಚಿಸುವೆವು.

ನವೆಂಬರ್_ಡಿಸೆಂಬರ್ ಎರಡು ತಿಂಗಳುಗಳು ನಮಗೆ ಅತ್ಯಂತ ಮಹತ್ವಪೂರ್ಣ· ಪ್ರವಚನ ಮತ್ತು ಶರಣ ಮೇಳ ಪ್ರಚಾರಕ್ಕೆ ಸೂಕ್ತವಾದ ಸಮಯ. ಈ ಬಾರಿ ಅಯೋಧ್ಯೆಯ ಸಮಸ್ಯೆಯಿಂದಾಗಿ ಪ್ರವಚನವು ಸಾರ್ವಜನಿಕವಾಗಿ ಸಾಧ್ಯವಾಗದೆ ಹೋಯಿತು. ಪೂಜ್ಯ ಅಪ್ಪಾಜಿಯವರು ಕೊಪ್ಪಳದಲ್ಲಿ ಮಾಡುತ್ತಿದ್ದ ಪ್ರವಚನವನ್ನು ಸ್ಥಗಿತಗೊಳಿಸಬೇಕಾಯಿತು. ಪೂಜ್ಯ ಶ್ರೀ ಗಂಗಾಮಾತಾಜಿಯವರೂ ಸಾರ್ವಜನಿಕವಾಗಿ ಪ್ರವಚನ ಮಾಡಿ, ಶರಣ ಮೇಳಕ್ಕೆ ದೇಣಿಗೆ ಸಂಗ್ರಹಿಸಲು ಅನಾನುಕೂಲವಾಯಿತು. ಬಸವ ಧರ್ಮ ಪೀಠದ ಖಾತೆಯ ಹಣವನ್ನು ಕೈಗಡವಾಗಿ ಕೊಟ್ಟು ಹಿಂದಿನ ಮೂರೂ ಶರಣ ಮೇಳಗಳಲ್ಲಿ ತುರ್ತಾಗಿ ಒದಗಿದ ಅಗತ್ಯಗಳನ್ನು ಪೂರೈಸಿರುವುದನ್ನು ಪ್ರಕಟಿಸಿರುವ ಲೆಕ್ಕಗಳಿಂದ ತಿಳಿಯಬಹುದು. ಈ ಬಾರಿ ಪ್ರವಚನದ ಅನಾನುಕೂಲತೆಯಿಂದ ಬಸವ ಧರ್ಮ ಪೀಠ ಮತ್ತು ವಿಶ್ವ ಕಲ್ಯಾಣ ಮಿಷನ್ ಖಾತೆಗಳಲ್ಲಿ ಕೈಗಡ ಕೊಡಲು ಹಣವೇ ಇಲ್ಲವಾಗಿದೆ. ಆದ್ದರಿಂದ ಶರಣ ಬಂಧುಗಳು ತಮ್ಮ ಹೆಗಲ ಮೇಲೆ ಹೆಚ್ಚಿನ ಹೊಣೆಗಾರಿಕೆಯನ್ನು ವಹಿಸಿಕೊಂಡು, ಶರಣ ಮೇಳಕ್ಕೆ ಧನ-ಧಾನ್ಯ, ಪಡಿ-ಪದಾರ್ಥ ಸಂಗ್ರಹಿಸಬೇಕು.

ಬಸವ ಧರ್ಮ-ಸಂಸತ್ ಸದಸ್ಯರು ತಮ್ಮ ವೈಯಕ್ತಿಕ ದೇಣಿಗೆ ಕೊಡುವುದಲ್ಲದೆ ತಮಗೆ ಕೈಲಾದಷ್ಟನ್ನು ತಮ್ಮ ಸುತ್ತಲಿನವರಿಂದ ಸಂಗ್ರಹಿಸಿಕೊಡಬೇಕು., ರಾಷ್ಟ್ರೀಯ ಬಸವ ದಳಗಳ ಘಟಕಗಳವರು ಪ್ರಚಾರ, ಸಂಘಟನೆ ಮತ್ತು ಹಣ ಸಂಗ್ರಹದ ವಿಷಯದಲ್ಲಿ ಹೆಚ್ಚಿನ ಆಸಕ್ತಿ ವಹಿಸಿ ಶರಣ ಮೇಳವನ್ನು ಯಶಸ್ವಿಗೊಳಿಸಬೇಕಾಗಿ ಸೂಚಿಸುವೆವು. ನಿಮ್ಮ ಮುಂದೆ ಈ ಬಿನ್ನಹವನ್ನಿಡದೆ ಯಾರ ಮುಂದೆ ಇಡಬಹುದು?

ಗುರು ಬಸವಣ್ಣನವರೇ ಹೇಳಿಲ್ಲವೆ? —

ಕೂಪವರಿಗೆ ಹೇಳುವೆನು ಕುಳಸ್ಥಳಂಗಳನೆಲ್ಲವನು
ಕೂರದವರಿಗೆ ಹೇಳಿ ನಾನೇವೆ ಶಿವನೆ?
ಕರಲ ಭೂಮಿಯಲ್ಲಿ ಕರೆವ ವೃಷ್ಟಿಯ ತೆರನಂತೆ
ಅವರೆತ್ತ ಬಲ್ಲರು ಎನ್ನ ಸುಖ–ದುಃಖವ?
ಅಂಗತವಿಲ್ಲದ ಸಂಗವು ಅಳಲಿಲ್ಲದ ಹುಯ್ಯಲಂತೆ !
ಇದು ಕಾರಣ ಕೂಡಲ ಸಂಗಮದೇವಾ,
ನಿಮ್ಮ ಶರಣರಿಗಲ್ಲದೆ ಬಾಯ್ದೆರೆಯೆನು.

—**ಮಾತಾಜಿ,** ಕಾರ್ಯಾಧ್ಯಕ್ಷೆ

ಶರಣ ಮೇಳ

ಶರಣ ಮೇಳ ಬರುತಿದೆ
ಮರುಳಿ ಉರುಳಿ ಬರುತಿದೆ
ವರುಷ ವರುಷ ಬರುತಿದೆ
ಹೊಸ ಯುಗವ ತರುತಿದೆ
ಬಸವ ಧರ್ಮ ಚಿಗುರಿದೆ
ಗಗನದತ್ತ ಸಾಗಿದೆ
ತತ್ವಸಾರ ಧರ್ಮಸಾರ ಬೆಳಸಿದೆ
ಹರುಷ ನಮಗೆ ತರುತಿದೆ
ಮನದ ಮಾಲೀನ್ಯ ತೊಳೆದಿದೆ
ಹೃದಯ ಮಿಲನ ಆಗಿದೆ
ನವ ಚೇತನ ಮೂಡಿದೆ
ಹೊಸ ಹುರುಪು ನೀಡಿದೆ
ಎಳ್ಳು–ಬೆಲ್ಲ ಬೆರಸಿದೆ
ಬಸವ ಕೃಪೆಯ ಹರಿಸಿದೆ
ಸುಖ ಸಂತಸ ನೀಡಿದೆ
ವಿಶ್ವ ಲೇಸು ಬಯಸಿದೆ

—**ವಿ. ಸುರೇಶ** S/o ವಾಸುದೇವ, ಶಿವಮೊಗ್ಗ.

ಶರಣ· ಗೌರಿಶಂಕರ್ ಅವರ ಸಂದೇಹಕ್ಕೆ ಉತ್ತರ

ಬೆಂಗಳೂರಿನ ಎಸ್. ಗೌರಿಶಂಕರ್ ಎಂಬ ಓರ್ವ ಶರಣ ಬಂಧುಗಳು ಕೆಲವು ಸಂದೇಹಗಳನ್ನು ವ್ಯಕ್ತಪಡಿಸಿ ಬರೆದಿದ್ದು, ಶರಣ ಮೇಳದ ಸನ್ನಿವೇಶದಲ್ಲಿ ಬಹಳ ಉಪಯುಕ್ತವೆಂದು ಉತ್ತರಿಸಿದ್ದೇನೆ.

ಅಕ್ಟೋಬರ್ ಕಲ್ಯಾಣ ಕಿರಣದಲ್ಲಿ ಶರಣಮೇಳದ ಬಗ್ಗೆ ಬರಹವಿದೆ, ಓದಿ ಸಂತೋಷವಾಗಿದೆ. ಈ ಬಾರಿಯ ಮೇಳಕ್ಕೆ ಮಿತ್ರರೊಡಗೂಡಿ ಬರಬೇಕೆಂದು ಅಪೇಕ್ಷೆಯುಂಟಾಗಿದೆ. ಕೆಲವು ಸಂದೇಹಕ್ಕೆ ಪರಿಹಾರ ನೀಡಿರಿ.

1. ಒಬ್ಬ ಪ್ರತಿನಿಧಿಗೆ ಶುಲ್ಕ 50 ರೂ. 4–5 ಜನರು ಗುಂಪಾಗಿ ಬಂದಾಗ ಅಥವಾ ಒಂದು ಚಿಕ್ಕಸಂಸಾರದ ಕುಟುಂಬ ಕ್ಷೇತ್ರಕ್ಕೆ ಬಂದಾಗ ಊಟ–ವಸತಿ ಬಗ್ಗೆ ಹೇಗೆ?

★ ಶಾಮಿಯಾನಾ ಕೋಣೆ 9 ಅಡಿ × 9 ಅಡಿ ಇರುವುದು. ಇದರಲ್ಲಿ 3 ಜನರಿಗೆ ವಾಸಕ್ಕೆ ಅವಕಾಶ ನೀಡಲಾಗುವುದು. ಒಂದು ವೇಳೆ ಒಂದೇ ಕುಟುಂಬದವರು ಒಂದು ಕೋಣೆ ಇಷ್ಟಪಟ್ಟರೆ ಅಲ್ಲಿಯೇ ಇರಬಹುದು. (ಷಾಮಿಯಾನಾ ಕೋಣೆಯಲ್ಲಿ ತಮ್ಮ ಸಾಮಾನು ಇಟ್ಟು ಹೋಗುವುದು ಹೇಗೆಂದು- ಭಯಪಡುವ ಕಾರಣ, ಒಂದು ಭದ್ರತಾ ಕೋಣೆ ಇರುತ್ತದೆ. ಅಲ್ಲಿ ಬೆಳಿಗ್ಗೆ ಇಟ್ಟುಹೋಗಿ, ರಾತ್ರಿ ಕಾರ್ಯಕ್ರಮ ಮುಗಿಸಿ ಬಂದ ಮೇಲೆ ತೆಗೆದುಕೊಂಡು ಮಲಗಲು ತಮ್ಮ ಕೋಣೆಗೆ ತೆರಳಬಹುದು.)

★ ಆರ್ಥಿಕವಾದ ಅನಾನುಕೂಲತೆ ಇರುವವರು ಪ್ರತಿಯೊಬ್ಬರಿಗೂ 50ರೂ ಕಟ್ಟಲು ಆಗದು (ಅದು 3 ದಿವಸಗಳ ವ್ಯವಸ್ಥೆಗೆ ಹೆಚ್ಚೇನಲ್ಲ) ಎಂದಾದರೆ ಕಾರ್ಯಾಲಯದಲ್ಲಿ ತಿಳಿಸಿ ತಮ್ಮ ಕೈಲಾದಷ್ಟು ದೇಣಿಗೆಯಾಗಿ ಸಲ್ಲಿಸಿ, ಅಷ್ಟೂ ಆಗದಿದ್ದರೆ ಉಚಿತ ಎಂದು ಬರೆಸಿ ಬ್ಯಾಡ್ಜ್ ಪಡೆಯಬೇಕು. ಬ್ಯಾಡ್ಜ್‌ಗಳೊಡನೆ ಊಟದ ಚೀಟಿ ಕೊಡಲಾಗುವುದು. ಒಂದು ಕಡೆಯಲ್ಲಿ ಬೆಳಗಿನ ತಿಂಡಿ, ಮಧ್ಯಾಹ್ನ–ರಾತ್ರಿ ಊಟ ಕೊಡಲಾಗುತ್ತಿರುತ್ತದೆ. ಅಲ್ಲಿಗೆ ಹೋಗಿ ಚೀಟಿ ಕೊಟ್ಟರೆ ಆಯಿತು. ಎಷ್ಟು ಜನ ಬಂದರೂ ಅಲ್ಲಿ ಹೋಗಿ ಪ್ರಸಾದ ಸ್ವೀಕರಿಸಬಹುದು.

2. **ವಿಚಾರಣಾ ಕೇಂದ್ರ :**

ಸ್ವಾಗತ ಸಮಿತಿಯನ್ನೇ ಸಂಗಮದಲ್ಲಿ ವಿಚಾರಣಾ ಕೇಂದ್ರ ಎಂದು ಭಾವಿಸಬೇಕೆ? ಪ್ರತಿನಿಧಿಗಳಿಗೆ ಬ್ಯಾಡ್ಜ್ ಉಂಟೆ? ಅಲ್ಲಿ ಭಾಗವಹಿಸಿದ ನೆನಪಿಗಾಗಿ ಶರಣ ಸೌರಭ ವಿಶೇಷ ಸಂಚಿಕೆ, ಬ್ಯಾಗ್ ಇತ್ಯಾದಿ ಉಚಿತವಾಗಿ ನೀಡಿದರೆ ಮೆರುಗು ಬಂದೀತು.

★ ವಾಹನಗಳು ಬರುತ್ತಲೇ ಮಹಾಮನೆ ಕ್ಯಾಂಪಸ್ ಬಳಿ ನಿಲ್ಲುತ್ತವೆ. ಅಲ್ಲಿ ವಿಚಾರಣಾ ಕೇಂದ್ರ ಎಂಬ ನಾಮಫಲಕ ಇರುವ ಕಾರ್ಯಾಲಯ ಇರುತ್ತದೆ. ಅಲ್ಲಿ ಇಳಿಯುತ್ತಲೇ ವಿವರ, ಬ್ಯಾಡ್ಜ್, ಊಟದ ಚೀಟಿ, ಕೋಣೆಯ ಸಂಖ್ಯೆ, ಕಾರ್ಯಕ್ರಮ ಪಟ್ಟಿ ಕೊಡಲಾಗುವುದು. ಉಚಿತವಾದ ಬ್ಯಾಗ್ ಕೊಡುವಷ್ಟು ಶ್ರೀಮಂತ ಸಮಿತಿ ನಮ್ಮದಲ್ಲ. ಯಾರನ್ನಾದರೂ ದಾನಿಗಳನ್ನು ಹುಡುಕಿಕೊಟ್ಟರೆ ಅವರಿಂದ ಕೊಡಿಸಲು ಸಾಧ್ಯವಾಗಬಹುದು.

3. **ಉಡುಪಿನ ಬಗ್ಗೆ ವಿವರಗಳು :**

ವೀರಶೈವರಲ್ಲಿ (ಲಿಂಗಾಯತರಲ್ಲಿ) ಉಡುಪಿನ ಬಗ್ಗೆ ಸ್ಥಿರತೆ ಇಲ್ಲ. ಬೆಂಗಳೂರಲ್ಲಿ ಪಂಚಪೀಠಾಧೀಶರ ಉತ್ಸವ–ಸಭೆ ನಡೆದವು. ಜಗದ್ಗುರುಗಳು ಕಾವಿ ಹೊದೆಯದೆ ಪೀತಾಂಬರ ಧರಿಸಿದ್ದರು. ಕಾರ್ಯಕರ್ತರು ವಿವಿಧ ಮಾದರಿಯ ವಿದೇಶಿ ಬಟ್ಟೆಯಲ್ಲಿ. ವನಿತೆಯರು ಜೀನ್ಸ್ ಪ್ಯಾಂಟ್, ಚೂಡಿದಾರ್ ಧರಿಸಿ ಅಡ್ಡಾಡಿದರು. ಮುಸ್ಲಿಮರ ಮೆಕ್ಕಾಯಾತ್ರೆಯಲ್ಲಿ ಒಂದೇ ಶಿಸ್ತು ಇರುವಂತೆ ಇಲ್ಲೇಕಿಲ್ಲ?

★ ನೀವು ಒಮ್ಮೆಯೂ ಶರಣ ಮೇಳಕ್ಕೆ ಬಂದು ನೋಡಿಲ್ಲ. ಆಗಲೇ ಸಮವಸ್ತ್ರದ ಶಿಸ್ತು ತರಲು ಪ್ರಯತ್ನಿಸಿದ್ದೇವೆ. ಬಿಳಿಯ ವಸ್ತ್ರಗಳು, ಮೇಲೆ ಕಾವಿಯ ಬಣ್ಣದ ಸ್ಕಾರ್ಫ್ ಒಂದೇ ರೀತಿ ಕಾಣುತ್ತದೆ. ಸಾಮೂಹಿಕ ಲಿಂಗಪೂಜೆಯಲ್ಲಿ ಮಿನಿ ಫ್ರಾಕ್, ಚೂಡೀಧಾರಿಣಿಯರ ವೇಷವನ್ನು ನಿಷೇಧಿಸಿದ್ದೇವೆ. ಏಕರೂಪತೆಯ ಶಿಸ್ತು ತರಲಿಕ್ಕೆ ಶರಣ ಮೇಳ ಯತ್ನಿಸುತ್ತಿದೆ.

4. 770 ಶರಣರ ಪೂಜೆ ಏಕೆ ?

★ ನಮಗೆ ಯಾವ ಸಂಖ್ಯಾ ನಿರ್ಬಂಧವೂ ಇಲ್ಲ. ಗುರು ಬಸವಣ್ಣನವರ ಕಾಲದಲ್ಲಿ ಲಿಂಗವಂತ ಧರ್ಮಾನುಯಾಯಿಗಳು ಒಂದು ಲಕ್ಷ ತೊಂಬತ್ತಾರು ಸಾವಿರ. ಅದರಲ್ಲಿ ನಿಷ್ಠಾವಂತ ಶರಣರು 770 ಎಂದು ಪ್ರಚಲಿತವಾಗಿದೆ. ಅದಕ್ಕಾಗಿ ಈ ಸಂಖ್ಯೆ ಆಯ್ದುಕೊಂಡಿದ್ದೇವೆ ಅಷ್ಟೇ.

5. ಪೂಜೆಗೇನೋ ಬಟ್ಟೆಗಳ ಬಗ್ಗೆ ಕೆಲವು ನಿರ್ಬಂಧತೆ ಇದೆ, ಸಮ್ಮೇಳನ–ಸಭೆಯಲ್ಲಿ ಭಾಗವಹಿಸುವವರಿಗೆಲ್ಲ ಏಕೆ ನಿರ್ಬಂಧ ಹಾಕಿಲ್ಲ?

★ ಪೂಜೆಗೆ ಬರುವವರು ಮೊದಲೇ ಸೂಚನಾ ಪತ್ರ ಪಡೆದಿರುತ್ತಾರೆ. ಅವರಿಗೆ ಸಮವಸ್ತ್ರದ ಬಗ್ಗೆ ತಿಳುವಳಿಕೆ ಇರುತ್ತದೆ. ಸಮ್ಮೇಳನಕ್ಕೆ ಸುತ್ತಲಿನ ಜನರೂ ಬರುತ್ತಾರೆ. ಅವರಿಗೆ ಇನ್ನೂ ಪೂರ್ತಿ ವಿವರ ತಿಳಿದಿರದು. ನಿರ್ಬಂಧ ಹಾಕಿ ಪ್ರವೇಶ ಕೊಡದಿದ್ದರೆ ತಪ್ಪಾಗುತ್ತದೆ. ಈ ಶಿಸ್ತನ್ನು ಹಂತಹಂತವಾಗಿ ಜಾರಿಗೆ ತರೋಣ.

6. ಪೂಜೆಯನ್ನು 12–1–91 ರಂದು ನಿಯೋಜಿಸಿದ್ದೀರಿ, 13, 14, 15 ರಂದು ಒಂದು ದಿನ ಇಡಬೇಕಿತ್ತು. ಆಗ ಕಾಯಕ ಜೀವಿಗಳಿಗೆ ರಜೆಯ ಸಮಸ್ಯೆ ಇರುತ್ತಿರಲಿಲ್ಲ. ಈ ಮೂರು ದಿನಗಳಲ್ಲಿ ಏಕೆ ಇಡಬಾರದು?

★ ವ್ಯವಸ್ಥಿತವಾಗಿ ಪೂಜೆಯನ್ನು ಏರ್ಪಡಿಸಿ ಇಷ್ಟಲಿಂಗ ತತ್ತ್ವದ, ಪೂಜೆಯ ವಿವರಣೆಯೊಡನೆ ವೀಡಿಯೋ ಫಿಲ್ಮನ್ನು ತೆಗೆಯಬೇಕು ಎಂಬ ಹೊರರಾಜ್ಯಗಳ ಬೇಡಿ

ಕೆಯ ಮೇರೆಗೆ ಈ ಕಾರ್ಯಕ್ರಮ ಹಮ್ಮಿಕೊಂಡಾಗ, ಪೂಜೆಗೆ ಪ್ರವೇಶ ಶುಲ್ಕವಿಡಲು ಶರಣ ಮೇಳ ಉತ್ಸವ ಸಮಿತಿಯ ಕೆಲವು ಸದಸ್ಯರು ಆಕ್ಷೇಪ ವ್ಯಕ್ತಪಡಿಸಿದ್ದರಿಂದ, 3 ದಿವಸಗಳ ಮಧ್ಯೆ ಹಾಕದೆ, ಬಸವ ಧರ್ಮ ಪೀಠದ ವತಿಯಿಂದ ಒಂದು ದಿವಸ ಮೊದಲಿಗೇ ಇಡಲಾಗಿದೆ. ಶರಣ ಮೇಳದಲ್ಲಿ ಜನ ಸಂದಣಿ ಬಹಳ ಆಗುವುದರಿಂದ ಚಿತ್ರೀಕರಣಕ್ಕೆ ಅನಾನುಕೂಲವಾಗಬಹುದು; ಮೊದಲಿಗೇ ಅದರ ಆಸಕ್ತರು ಮಾತ್ರ ಬರುವರು, ಎಂಬುದೂ ಇನ್ನೊಂದು ಉದ್ದೇಶ. ಎಷ್ಟು ಟೆಂಟು, ಮಂಟಪ ಹಾಕಿದರೂ ಜನರು ಅಲ್ಲೆಲ್ಲ ಬೀಡುಬಿಡುವುದು ಅನಿವಾರ್ಯವಾಗುವುದು, ಕುಳಿತುಕೊಳ್ಳಲು ಹಾಕುವ ಗುರುತುಗಳು ಉಳಿಯುವುದೇ ಇಲ್ಲ. ಆದ್ದರಿಂದ ಹೆಚ್ಚಿನ ಜನಸಂದಣಿ ಸೇರುವ ಮೊದಲೇ ಪೂಜೆಯ ಚಿತ್ರೀಕರಣ ಮುಗಿಸುವ ಆಲೋಚನೆ ಇದೆ. ನೀವು ಕಳವಳ ಪಡುವ ಕಾರಣವಿಲ್ಲ, 12-1-1991 ಎರಡನೆ ಶನಿವಾರ, ಸರ್ಕಾರಿ ನೌಕರರ ರಜಾದಿನ, ಮತ್ತು ಪ್ರತಿವರ್ಷದಂತೆ 15-1-1991 ರಂದು ಸಾಮೂಹಿಕ ಇಷ್ಟಲಿಂಗ ಪೂಜೆ(ಉಚಿತವಾಗಿ) ಇದ್ದೇ ಇರುವುದು. ಆಗ ಯಾರು ಬೇಕಾದರೂ ಭಾಗವಹಿಸಬಹುದು. 12-1-91 ರಂದು ಬರಲಾಗದಿದ್ದವರು 15-1-91 ರಂದು ಪೂಜೆಗೆ ಕುಳಿತುಕೊಳ್ಳಬಹುದು,

---

ಸ್ವಯಂ ಸೇವಕರಿಗೆ ಸೂಚನೆ

ನಾಲ್ಕನೆಯ ಶರಣ ಮೇಳದಲ್ಲಿ ದುಡಿಯಲು, ಕೆಲವೊಂದು ಉಸ್ತುವಾರಿ ಮಾಡಲು ಎಂದಿನಂತೆ ನಿಷ್ಠಾವಂತ ಕಾರ್ಯಕರ್ತರ ಅಗತ್ಯವಿರುತ್ತದೆ. ಈಗಾಗಲೇ ಅನೇಕ ಶರಣ ಬಂಧುಗಳು ಕೂಡಲ ಸಂಗಮಕ್ಕೆ ಬಂದಿದ್ದಾರೆ. ಆದ್ದರಿಂದ ಆಸಕ್ತರು ಸಾಧ್ಯವಾದಷ್ಟು ಬೇಗನೆ ಬರಬೇಕು, ಪ್ರತಿವರ್ಷ ಸೇವಾಕಾರ್ಯಕ್ಕೆ ಬರುವವರು ಕನಿಷ್ಟಪಕ್ಷ 15 ದಿನಗಳ ಮೊದಲಿಗೇ ಬರಬೇಕೆಂದು ಕೋರುತ್ತೇವೆ.

—ಸೋದರಿ ಜಯಮ್ಮ, ಮೇನೇಜರ್

ಶರಣ ಮೇಳದ ವಿಶೇಷ ಆಕರ್ಷಣೆ

ಶ್ರೀಮತಿ ಉಷಾ ದಾತಾರ್‌ರವರಿಂದ ತರಬೇತಿ ಪಡೆದ ಕಾರ್ತಿಕೇಯನ್ ಕಲಾ ಕೇಂದ್ರದ ಕುಮಾರಿ ಶ್ರುತಿ ಆನಂದಳ ಭರತನಾಟ್ಯ, ಮೋಹಿನಿ ಆಟ್ಟಂ ಮತ್ತು ವಚನಾ ಭಿನಯ ಶರಣ ಮೇಳದ ಈ ಬಾರಿಯ ವಿಶೇಷ ಸಾಂಸ್ಕೃತಿಕ ಕಾರ್ಯಕ್ರಮ. ಕೇವಲ ಎಂಟು ವರ್ಷದ ಪ್ರತಿಭಾವಂತ ಚೇತನವಾದ ಶ್ರುತಿ ಅತ್ಯಂತ ಕಿರಿದಾದ ವಯಸ್ಸಿನಲ್ಲಿ ರಂಗಪ್ರವೇಶ ಮಾಡಿ, ಸುದ್ದಿ ಮಾಡಿದ್ದಾಳಲ್ಲದೆ, ತನ್ನ ಅದ್ಭುತ ಪ್ರತಿಭೆಯಿಂದ ಅಪೂರ್ವ ಪ್ರಚಾರ ಗಿಟ್ಟಿಸಿಕೊಂಡಿದ್ದಾಳೆ. ಕಲಾವಂತಿಕೆ, ಪ್ರತಿಭೆ, ಮುಗ್ಧ ಮುಖಭಾವ, ಸೌಂದರ್ಯದ ಸಂಗಮವಾದ ಪುಟ್ಟ ಬಾಲೆ ಶ್ರುತಿ ಆನಂದ ಈ ಸಲ ಶಿವ ತಾಂಡವ ಶಿವಸ್ತುತಿ, ಬಸವಣ್ಣನವರು- ಅಕ್ಕಮಹಾದೇವಿ ವಚನಗಳನ್ನು 14-1-1991ರಂದು ವಿಶೇಷ ಬೆಳಕಿನ ಸಂಯೋಜನೆಯಲ್ಲಿ ಪ್ರದರ್ಶಿಸಲಿದ್ದಾಳೆ.

೧೯೯೧ ನೇ ವರ್ಷದ ಕೆಲವು ಹಬ್ಬ-ಹುಣ್ಣಿಮೆ, ಜನ್ಮದಿನೋತ್ಸವಗಳು

೧.	ಬಸವ ಕ್ರಾಂತಿ ದಿನ	೧೪-೧-೧೯೯೧
೨.	ಶ್ರೀ ಸಿದ್ಧ ರಾಮೇಶ್ವರ ಜಯಂತಿ	೧೪-೧-೧೯೯೧
೩.	ಗಣರಾಜ್ಯೋತ್ಸವ *	೨೬-೧-೧೯೯೧
೪.	ಚನ್ನಹುಣ್ಣಿಮೆ(ಉಳವಿಜಾತ್ರೆ)	೩೦-೧-೧೯೯೧
೫.	ಸರ್ವಶರಣರ ದಿನಾಚರಣೆ (ಮಹಾಶಿವರಾತ್ರಿ) *	೧೨-೨-೧೯೯೧
೬.	ಪೂಜ್ಯ ಮಾತಾಜಿಯವರ ವರ್ಧಂತಿ	೧೩-೩-೧೯೯೧
೭.	ಅಲ್ಲಮಪ್ರಭು ಜಯಂತಿ(ಯುಗಾದಿ) *	೧೭-೩-೧೯೯೧
೮.	ಅಕ್ಕಮಹಾದೇವಿ ಜಯಂತಿ	೩೦-೩-೧೯೯೧
೯.	ಮಡಿವಾಳ ಮಾಚಿದೇವ ಜಯಂತಿ ಮತ್ತು ಕಾಯಕ ದಿನಾಚರಣೆ	೧-೫-೧೯೯೧
೧೦.	ಬಸವ ಜಯಂತಿ *	೧೫-೫-೧೯೯೧
೧೧.	ಬಸವ ಪಂಚಮಿ(ಬಸವ ಲಿಂಗೈಕ್ಯ ದಿನ)	೧೪-೮-೧೯೯೧
೧೨.	ನೀಲಮ್ಮ ಷಷ್ಠಿ	೧೫-೮-೧೯೯೧
೧೩.	ಸ್ವಾತಂತ್ರ್ಯ ದಿನೋತ್ಸವ *	೧೫-೮-೧೯೯೧
೧೪.	ಪೂಜ್ಯ ಶ್ರೀ ಸದ್ಗುರು ಲಿಂಗಾನಂದ ಗುರುಗಳ ವರ್ಧಂತಿ	೧೧-೯-೧೯೯೧
೧೫.	ಕಲ್ಯಾಣ ಕ್ರಾಂತಿ ದಿನ(ಮಹಾನವಮಿ) *	೧೭-೧೦-೧೯೯೧
೧೬.	ಬಸವ ಧರ್ಮ ವಿಜಯೋತ್ಸವ (ವಿಜಯದಶಮಿ) * ಮತ್ತು ಅಕ್ಕನಾಗಲಾಂಬಿಕಾ ಸಂಸ್ಮರಣಾದಿನ	೧೮-೧೦-೧೯೯೧
೧೭.	ಗಾಂಧೀ ಜಯಂತಿ *	೨-೧೦-೧೯೯೧
೧೮.	ಚನ್ನಬಸವ ಜಯಂತಿ (ಕಾರ್ತೀಕ ಪ್ರತಿಪದೆ) *	೭-೧೧-೧೯೯೧

* ಸರ್ಕಾರಿ ರಜಾದಿನಗಳು

ಪ್ರಕಟಣೆ :



ಬಸವ ಧರ್ಮ ಪೀಠ [ರಿ.]

ಮಹಾಮನೆ ಮಹಾಮಠ

ಕೂಡಲ ಸಂಗಮ–587115

ತಾ- ಹುನಗುಂದ, ಜಿ- ಬಿಜಾಪುರ

ಕೂಡಲ ಸಂಗಮ ಕ್ರಾಸಿಗೆ ಬರುವ
ಕ. ರಾ. ರ. ಸಾ. ಸಂಸ್ಥೆ ಬಸ್ಸುಗಳ ವಿವರ

ರಾಷ್ಟ್ರೀಯ ಹೆದ್ದಾರಿ ನಂ. 13, ಬೆಂಗಳೂರು–ಸೊಲ್ಲಾಪುರವನ್ನು ಸಂಪರ್ಕಿಸುವ ರಸ್ತೆ. ಬೆಂಗಳೂರಿಂದ ಚಿತ್ರದುರ್ಗದವರೆಗೆ, ರಾಷ್ಟ್ರೀಯ ಹೆದ್ದಾರಿ 4 ಮತ್ತು 13 ಒಂದೇ ಇದ್ದು, ಚಿತ್ರದುರ್ಗದಿಂದ 13 ನೇ ನಂಬರ್ ಟಿಸಿಲು ಒಡೆಯುತ್ತದೆ. ಚಿತ್ರದುರ್ಗ– ಕೂಡ್ಲಿಗಿ–ಹೊಸಪೇಟೆ– ಕುಷ್ಟಗಿ– ಇಳಕಲ್– ಹುನಗುಂದ– ಆಲಮಟ್ಟಿ ಹೀಗೆ ಬಿಜಾಪುರ–ಸೊಲ್ಲಾಪುರಕ್ಕೆ ಸಾಗುತ್ತದೆ. ಹುನಗುಂದ ದಾಟಿದ ಮೇಲೆ, ಆಲಮಟ್ಟಿ ಮೊದಲು ಕೂಡಲ ಸಂಗಮ ಕ್ರಾಸ್ ಬರುತ್ತದೆ. ಇಲ್ಲಿಗೆ ಕೂಡಲ ಸಂಗಮವು 7 ಕಿಲೋಮೀಟರ್ ಇರುತ್ತದೆ. ಈ ಸ್ಥಳಕ್ಕೆ ಬಾಗಲಕೋಟೆ, ಇಳಕಲ್, ಬಾದಾಮಿ, ಬಿಜಾಪುರ ಮುಂತಾದ ಸ್ಥಳಗಳಿಂದ ಬರುವ ರಸ್ತೆ ಕೂಡುತ್ತವೆ. ಈ ಕ್ರಾಸಿಗೆ ಬಂದು ಹೋಗುವ ಬಸ್ಸುಗಳ ವಿವರ ಕೊಡಲಾಗಿದೆ.

		ಬರುವ ವೇಳೆ	
1.	ಕೂಡ್ಲಿಗಿ–ಸಂಗಮ	ಸಂಜೆ	6-15
2.	ಸಂಗಮ–ಕೂಡ್ಲಿಗಿ	ಬೆಳಿಗ್ಗೆ	6-15
3.	ಸೊಲ್ಲಾಪುರ–ಇಳಕಲ್	ರಾತ್ರಿ	10-30
4.	ಇಳಕಲ್–ಸೊಲ್ಲಾಪುರ	ಬೆಳಿಗ್ಗೆ	6-30
5.	ಸವದತ್ತಿ–ಸಂಗಮ	ಸಂಜೆ	7.30
6.	ಸಂಗಮ–ಸವದತ್ತಿ	ಬೆಳಿಗ್ಗೆ	7-30
7.	ಸಂಕೇಶ್ವರ–ಸಂಗಮ	ಸಂಜೆ	7-30
8.	ಸಂಗಮ–ಸಂಕೇಶ್ವರ	ಬೆಳಿಗ್ಗೆ	7.30
9.	ಬದಾಮಿ–ಸಂಗಮ	ರಾತ್ರಿ	8-30
10.	ಸಂಗಮ–ಬದಾಮಿ	ಬೆಳಿಗ್ಗೆ	7-00
11.	ಇಳಕಲ್–ಬಿಜಾಪುರ	ಬೆಳಿಗ್ಗೆ	8-00
12.	ಬಿಜಾಪುರ–ಇಳಕಲ್	ರಾತ್ರಿ	8-00
13.	ಬೆಂಗಳೂರು–ಇಂಡಿ	ಬೆಳಿಗ್ಗೆ	7-30
14.	ಇಂಡಿ–ಬೆಂಗಳೂರು	ರಾತ್ರಿ	12-30
15.	ಬಾಗಲಕೋಟೆ–ಸಂಗಮ	ಬೆಳಿಗ್ಗೆ	9-10
16.	ಸಂಗಮ–ಬಾಗಲಕೋಟೆ	ಬೆಳಿಗ್ಗೆ	10-00
17.	ಇಳಕಲ್–ಸಂಗಮ	ಬೆಳಿಗ್ಗೆ	8-00
18.	ಬಾಗಲಕೋಟೆ–ಸಂಗಮ	ಬೆಳಿಗ್ಗೆ	10-30
19.	ಸಂಗಮ–ಬಾಗಲಕೋಟೆ	ಬೆಳಿಗ್ಗೆ	11-30
20.	ಅಕ್ಕಿ ಆಲೂರು–ಬಿಜಾಪುರ	ಸಂಜೆ	5.00
21.	ಬಿಜಾಪುರ–ಅಕ್ಕಿ ಆಲೂರು	ಬೆಳಿಗ್ಗೆ	9-00
22.	ಕೊಪ್ಪಳ–ಬಿಜಾಪುರ	,,	9-00
23.	ಬಿಜಾಪುರ–ಕೊಪ್ಪಳ	ಸಂಜೆ	6-00
24.	ಹಿರೇಕೆರೂರ–ಬಿಜಾಪುರ	ಬೆಳಿಗ್ಗೆ	10.30
25.	ಬಿಜಾಪುರ–ಹಿರೇಕೆರೂರು	ಸಂಜೆ	6-30
26.	ಹುನಗುಂದ–ಸಂಗಮ	ಬೆಳಿಗ್ಗೆ	10-00
27.	ಇಳಕಲ್–ಸಂಗಮ	ಮಧ್ಯಾಹ್ನ	12-00
28.	ಕೊಪ್ಪಳ–ತಾಳೀಕೋಟೆ	ಬೆಳಿಗ್ಗೆ	10-30
29.	ತಾಳೀಕೋಟೆ–ಕೊಪ್ಪಳ	ಸಂಜೆ	4-30
30.	ಲಕ್ಷ್ಮೇಶ್ವರ–ಇಂಡಿ	ಸಂಜೆ	4-30
31.	ಇಂಡಿ–ಲಕ್ಷ್ಮೇಶ್ವರ	ಬೆಳಿಗ್ಗೆ	11-00
32.	ಬೆಂಗಳೂರು–ಸಂಗಮ	ಸಂಜೆ	6.00
33.	ಸಂಗಮ–ಬೆಂಗಳೂರು	ಬೆಳಿಗ್ಗೆ	7-00
34.	ಅಮೀನಗಡ–ಸಂಗಮ	ಸಂಜೆ	4-00
35.	ಬಾಗಲಕೋಟೆ–ಸಂಗಮ	,,	4-00
36.	ಬಾಗಲಕೋಟೆ–ಸಂಗಮ	ಮಧ್ಯಾಹ್ನ	12-00
37.	ಸಂಗಮ–ಬಾಗಲಕೋಟೆ	ಮಧ್ಯಾಹ್ನ	1-30
38.	ಸಂಗಮ–ಬಾಗಲಕೋಟೆ	ಸಂಜೆ	4-30
39.	ಮೈಸೂರು–ಸೊಲ್ಲಾಪುರ	ಬೆಳಿಗ್ಗೆ	5-00
40.	ಸೊಲ್ಲಾಪುರ–ಮೈಸೂರು	ರಾತ್ರಿ	9-00
41.	ಸೂಪರ್ ಡೀಲಕ್ಸ್, ಬೆಂಗಳೂರು–ಬಿಜಾಪುರ	ಬೆಳಿಗ್ಗೆ	6-00
42.	,, ಬಿಜಾಪುರ–ಬೆಂಗಳೂರು	ಸಂಜೆ	7.30
43.	ಸೆಮಿ ಲಕ್ಷುರಿ, ಬೆಂಗಳೂರು–ಬಿಜಾಪುರ	ಬೆಳಿಗ್ಗೆ	4-30
44.	,, ಬಿಜಾಪುರ–ಬೆಂಗಳೂರು	ರಾತ್ರಿ	11-00

ಹೀಗೆ ಬಸ್ಸುಗಳು ಸಂಚರಿಸುತ್ತವೆ.

○ ○ ○ ○ ○

1. ಶರಣ ಮೇಳ ಉತ್ಸವ ಸಮಿತಿಯು ಸಂಗಮ ಕ್ರಾಸಿನಲ್ಲಿ ಈ ಬಾರಿ, ಒಂದು ಶಾಮಿಯಾನ ಹಾಕಿಸುತ್ತದೆ. ಆವೇಳೆಯಲ್ಲಿ ಬಂದವರು ಕುಳಿತುಕೊಳ್ಳಲು ಮತ್ತು ವಿವರಗಳನ್ನು ಪಡೆಯಲು ಈ ವಿಚಾರಣಾ ಕೇಂದ್ರ ಲಭ್ಯವಿರುತ್ತದೆ.
2. ಕರ್ನಾಟಕ ರಸ್ತೆ ಸಾರಿಗೆ ಸಂಸ್ಥೆಯು ತನ್ನ KST/CO/ಸಂಚಾರ-ಚಾಲನೆ-ಬಿವಿ-186-9067, ದಿ. 11-12-90ರ ಪ್ರಕಾರ ದಿ. 12-1-91 ರಿಂದ 16-1-91ರ

ವರೆಗೆ, ರಾಷ್ಟ್ರೀಯ ಹೆದ್ದಾರಿ ಸಂಖ್ಯೆ 13ರ ಮೇಲೆ ಸಂಚರಿಸುವ ನಿಗಮದ ಎಲ್ಲ ಸಾರಿಗೆಗಳಿಗೆ ಕೂಡಲ ಸಂಗಮ ಅಡ್ಡರಸ್ತೆಯಲ್ಲಿ ನಿಲ್ಲಿಸಲು ಸೂಚನೆ ನೀಡಿದೆ ಎಂಬುದನ್ನು ಜನರ ಗಮನಕ್ಕೆ ತರುತ್ತಿದ್ದೇವೆ.

ಕ. ರಾ. ರ. ಸಾ. ಸಂಸ್ಥೆಯ ಆದೇಶ

ಕ. ರಾ. ರ. ಸಾ. ಸಂಸ್ಥೆಯು ಸಂ: ಕಾಯ: ಬಿ.ವಿ. 186: 8235: 90-91 ದಿ. 21-11-90. ಪತ್ರದ ಮೂಲಕ 1991ನೆಯ ಜನವರಿ 13, 14, 15 ರಂದು ಕೂಡಲ ಸಂಗಮದಲ್ಲಿ ನಡೆಯುವ ಶರಣ ಮೇಳಕ್ಕೆ ರಾಜಧಾನಿ ಬೆಂಗಳೂರು, ಜಿಲ್ಲಾ ಕೇಂದ್ರಗಳು, ಮತ್ತು ಇತರ ಮುಖ್ಯ ಸ್ಥಳಗಳಿಂದ ಹೆಚ್ಚುವರಿ ಬಸ್ಸುಗಳನ್ನು ಪ್ರಯಾಣಿಕರ ಒತ್ತಡಕ್ಕೆ ಅನುಗುಣವಾಗಿ ಬಿಡಲು ನಿಯಂತ್ರಣಾಧಿಕಾರಿಗಳಿಗೆ ಕಳಿಸಲಾಗಿದೆ. ಇದರ ಸೌಲಭ್ಯವನ್ನು ಉಪಯೋಗಪಡಿಸಿಕೊಳ್ಳಬೇಕೆಂದು ಸೂಚಿಸುತ್ತೇವೆ.

—**ಎಲ್. ಎಸ್. ಪಾಟೀಲ,** ಶರಣ ಮೇಳ ಉತ್ಸವ ಸಮಿತಿ.

ಶರಣ ಮೇಳ ಉತ್ಸವಕ್ಕೆ ಕಾಯಂ ನಿಧಿ

ಶರಣ ಮೇಳವು ಪ್ರತಿವರ್ಷವೂ ನಡೆಯುವ ಮಹತ್ವಪೂರ್ಣ ಕಾರ್ಯಕ್ರಮ. ಅಲ್ಲಿ ನಡೆಯುವ ದಾಸೋಹದಲ್ಲಿ ಗುರುಕಾಣಿಕೆ ಸಲ್ಲಿಸಿ ಭಾಗಿಗಳಾಗುವುದು ಒಂದು ಕರ್ತವ್ಯ. ಕೆಲವರು ಈ ಬಗ್ಗೆ ಹೀಗೆ ಆಲೋಚಿಸುತ್ತಿದ್ದಾರೆ. ಸಾಮಾನ್ಯವಾಗಿ ಪ್ರತಿವರ್ಷವೂ ಈ ಕಾರ್ಯಕ್ಕೆ ಕೊಡುವವರುಕಾಯಂ ನಿಧಿಯನ್ನಾಗಿ ಇಡಲು ಹಣ ಕೊಟ್ಟರೆ, ಅದರ ಬಡ್ಡಿಹಣ ಪ್ರತಿವರುಷಕೊಮ್ಮೆ ಜಮಾ ಆಗುವಂತೆ ಇಟ್ಟು, ಅದನ್ನು ಉತ್ಸವ ಸಮಿತಿಯವರು ಶರಣ ಮೇಳದ ದಾಸೋಹಕ್ಕೆ ಬಳಸುವುದು. ಈ ಸೂಚನೆಯನ್ನು ಕಳಿಸಿದ ಶರಣೆ ಸರೋಜತಾಯಿ ನಾಗರಾಜು, ಮೈಸೂರು ಇವರು ಸೂಚನೆಯೊಡನೆ 5000 ರೂಪಾಯಿಗಳ ದೇಣಿಗೆಯನ್ನು ಕೊಡಿಸಿದ್ದಾರೆ. ಈ ಪ್ರೇರಣೆಯೊಡನೆ ಮುಂದೆ ಬಂದವರು ಶರಣೆ. ಶಿವಮ್ಮ ಪಿ.ಸಿ. ಗುರುಮಲ್ಲಪ್ಪ, ಮೈಸೂರು. ಅದೇ ರೀತಿ ಶರಣ. ಪುಟ್ಟರುದ್ರಪ್ಪನವರ ಮಿತ್ರರಾದ ಬಿ. ಕೆ. ಸಂಜುಂಡಪ್ಪ, ಬೆಂಗಳೂರು ಇವರು ಸಹ ಅವರ ತಂದೆತಾಯಿ ಹೆಸರಿನಲ್ಲಿ ಶರಣ ಮೇಳದಲ್ಲಿ ದಾಸೋಹ ಗೈಯಲು 5001-00 ರೂ. ಪುದುವಟ್ಟನ್ನಾಗಿ ಕೊಡುತ್ತಿದ್ದಾರೆ.

Kalyana Kirana - Monthly magazine Printed and Published by B. Shabhulingaiah, at Prabhudeva Printing Press, Basava Gangotri, Kumbalgod-560074

ಶರಣ ಸೌರಭ

"ಕಲ್ಯಾಣ ಕಿರಣ" ವಿಶೇಷ ಸಂಚಿಕೆ

ವಿಶ್ವಗುರು ಬಸವಣ್ಣನವರ ವಿದ್ಯಾಭೂಮಿ, ತಪೋಸ್ಥಾನ, ಐಕ್ಯಕ್ಷೇತ್ರವಾದ ಕೂಡಲ ಸಂಗಮದಲ್ಲಿ 1991 ಜನವರಿ 13, 14 ಮತ್ತು 15 ರಂದು ನಾಲ್ಕನೆಯ ಬೃಹತ್ ಶರಣ ಮೇಳವು ನಡೆಯಲಿದ್ದು, ಬಸವ ಭಕ್ತರು, ಬಸವ ತತ್ವಾಭಿಮಾನಿಗಳು ಲಕ್ಷಗಟ್ಟಳೆ ಸಂಖ್ಯೆಯಲ್ಲಿ ನೆರೆದು, ಸಮುದಾಯ ಪ್ರಾರ್ಥನೆ, ಸಾಮೂಹಿಕ ಪೂಜೆಗಳಲ್ಲಿ ಭಾಗವಹಿಸಲಿದ್ದಾರೆ. ಇಂತಹ ಮಹತ್ವಪೂರ್ಣ ಸನ್ನಿವೇಶದಲ್ಲಿ ಆಫ್ ಸೆಟ್ ವರ್ಣರಂಜಿತ ಚಿತ್ರಗಳೊಡನೆ, ಉತ್ತಮ ಹಾಗೂ ಮಹತ್ವಪೂರ್ಣ ಲೇಖನಗಳೊಡನೆ ಹಿಂದಿನ ಶರಣ ಮೇಳದ ವಿಶೇಷ ಚಿತ್ರಗಳೊಡನೆ "ಶರಣ ಸೌರಭ" ಎಂಬ ವಿಶೇಷ ಸಂಚಿಕೆಯನ್ನು "ಕಲ್ಯಾಣ ಕಿರಣ" ಮಾಸ ಪತ್ರಿಕೆಯು ಹೊರತರಲಿದೆ. ಶರಣ–ಸೌರಭವು ಸಂಗ್ರಹಯೋಗ್ಯ ಕೃತಿಯಾಗಲಿದೆ. ಹತ್ತುಸಾವಿರ ಪ್ರತಿಗಳು ಮುದ್ರಣಗೊಳ್ಳುವ ಈ ವಿಶೇಷ ಸಂಚಿಕೆಯ ಜಾಹಿರಾತು ದರಗಳು ಕೆಳಗಿನಂತಿವೆ.

ವಿಶೇಷ ಸಂಚಿಕೆಯ ಆಕಾರ

ಪೂರ್ಣ ಪುಟ : 19 ಸೆಂ. ಮೀ. × 12 ಸೆಂ.ಮೀ. (1/8 ಡೆಮ್ಮಿ)
ಅರ್ಧ ಪುಟ : 12 ಸೆಂ. ಮೀ. × 8½ ಸೆಂ. ಮೀ.

ವಿಶೇಷ ಸಂಚಿಕೆಯ ರಕ್ಷಾ ಕವಚ (ಆಫ್ ಸೆಟ್ ವರ್ಣಗಳಲ್ಲಿ)

ನಾಲ್ಕನೆಯ ಪುಟ : 3000 ರೂ. [ಆಫ್ ಸೆಟ್ ವರ್ಣಗಳಲ್ಲಿ]
2ನೆಯ ಮತ್ತು ಮೂರನೆಯ ಪುಟಗಳು: 2000 ರೂ. ,, ,,
ವಿಶೇಷ ಪುಟಗಳು : 1000 ರೂ ,, ,,

ಒಳ ಪುಟಗಳು-ಒಂದು ಪೂರ್ಣ ಪುಟ : 500. ರೂ. ಅರ್ಧ ಪುಟ : 300 ರೂ

ವಿ.ಸೂ :- ಅರ್ಧ ಪುಟಕ್ಕಿಂತಲೂ ಕಮ್ಮಿಯಾದ ಜಾಹಿರಾತು ಸ್ವೀಕರಿಸುವುದಿಲ್ಲ. ಜಾಹಿರಾತುಗಳ ಪೂರ್ಣ ವಿವರಗಳು ಪೂರ್ಣಮೊತ್ತದೊಡನೆ 30-12-90ರ ಮುಂಚೆ ಕೈಸೇರುವಂತಾಗಬೇಕು.

ಬ್ಯಾಂಕ್ ಡ್ರಾಫ್ಟ್ ಮತ್ತು ಚೆಕ್ಕುಗಳನ್ನು ಕಳಿಸುವವರು "ಕಲ್ಯಾಣ ಕಿರಣ, ಬೆಂಗಳೂರು" ಎಂಬ ಹೆಸರಿನಲ್ಲಿ ಕೆಳಗಿನ ವಿಳಾಸಕ್ಕೆ ಕಳಿಸಬೇಕು.

ಸ್ವಯಂ ಇಚ್ಛೆಯ ಕಾಣಿಕೆ ಕಳಿಸುವವರೂ ಕಳಿಸಬಹುದು.

ಕಲ್ಯಾಣ ಕಿರಣ, ವಿಶ್ವಕಲ್ಯಾಣ ಮಿಷನ್, ಬಸವ ಮಂಟಪ, 20ನೆಯ ಮುಖ್ಯ ರಸ್ತೆ, 2ನೇಬ್ಲಾಕು, ರಾಜಾಜಿನಗರ ಬೆಂಗಳೂರು-560010

ಕಲ್ಯಾಣ ಕಿರಣ

KRNB 312/BGW 92

NOVEMBER 199

